# THE COASTAL REGULATION ZONE (CRZ) NOTIFICATION 2011

A primer for coastal fishing communities (Draft)

in Kannada




June 2011

# ಕರಾವಳಿ ನಿಯಂತ್ರಣ ವಲಯ (ಸಿಆರ್‌ಜೆಡ್)

# ಅಧಿಸೂಚನೆ – 2011

# ಕರಾವಳಿ ಮೀನುಗಾರಿಕೆ ಸಮುದಾಯಗಳಿಗೆ ಒಂದು ಪ್ರಾಥಮಿಕ ವಿವರಣ

## ಪೀಠಿಕೆ:

ದಿನಾಂಕ 6 ಜನವರಿ 2011 ರಂದು ಮಾನ್ಯ ಪರಿಸರ ಮತ್ತು ಅರಣ್ಯ ರಾಜ್ಯ ಸಚಿವರಾದ ಶ್ರೀ. ಜಯರಾಮ್ ರಮೇಶ್, ರವರು ಕರಾವಳಿ ನಿಯಂತ್ರಣ ವಲಯ (ಸಿಆರ್‌ಜೆಡ್) ಅಧಿಸೂಚನೆ 2011 (ಭಾರತ ಸರ್ಕಾರ 2011) ಬಿಡುಗಡೆ ಮಾಡಿದರು. ಈ ಅಧಿಸೂಚನೆಯು ಕರಾವಳಿ ನಿಯಂತ್ರಣ ವಲಯ 1991 ರ ಪರಿಷ್ಕರಣೆಗೆ ಸಂಬಂಧಿಸಿದಂತೆ ಹಲವಾರು ವರ್ಷಗಳಿಂದ ನಡೆದ ಸಮಾಲೋಚನೆ ಪ್ರಕ್ರಿಯೆಗಳನ್ನು ಅಂತಿಮಗೊಳಿಸಿದೆ. ಮಿನುಗಾರಿಕೆ ಸಮುದಾಯಗಳಲ್ಲಿ ಹಾಗೂ ಪರಿಸರ ಗುಂಪುಗಳಲ್ಲಿ ಈ ಪ್ರಕ್ರಿಯೆಯು ಹೆಚ್ಚಿನ ನಿರೀಕ್ಷಯನ್ನು ಉಂಟುಮಾಡಿರುತ್ತದೆ.

ಮೀನುಗಾರಿಕೆ ಸಮುದಾಯಗಳಿಗೆ ಹಾಗೂ ಬೆಂಬಲ ಸಂಸ್ಥೆಗಳಿಗೆ 2011 ಅಧಿಸೂಚನೆಯ ಪರಿವಿಡಿಯ ಬಗ್ಗೆ, ಮೀನುಗಾರಿಕೆ ಸಮುದಾಯ ಸಂಸ್ಥೆಗಳಿಗೆ ಕಾಳಜಿ ಇರುವ ವಿಷಯಗಳ ಮುಂದುವರಿಕೆ ಬಗ್ಗೆ ಹಾಗೂ ಕರಾವಳಿ ಜೀವಾವರಣಗಳ ಹೆಚ್ಚಿನ ಸಂರಕ್ಷಣೆಯನ್ನು ನಿಶ್ಚಯ ಮಾಡಲು ಅವರು ವಹಿಸಬಹುದಾದ ಪಾತ್ರಗಳ ಬಗ್ಗೆ ತಿಳುವಳಿಕೆ ನೀಡಲು ಈ ಪ್ರಾಥಮಿಕ ವಿವರಣವನ್ನು ತಯಾರಿಸಲಾಗಿರುತ್ತೆದೆ.

ಅಧಿಸೂಚನೆಯ ಸಂದರ್ಭ, ಮೀನುಗಾರಿಕೆ ಸಮುದಾಯಗಳ ಆಸಕ್ತಿಗೆ ಪರ ಮತ್ತು ವಿರುದ್ಧವಾಗುವ ವ್ಯವಸ್ಥೆಗಳು, ಹಾಗೂ ಮೀನುಗಾರಿಕೆ ಸಮುದಾಯಗಳು ನಿರ್ಣಯ ರೂಪಿಸುವಲ್ಲಿ, ಮೆಲ್ವಿಚಾರಣೆ ಮತ್ತು ಅಮಲುಜಾರಿ ಮಾಡಬಹುದಾದ ಹಾಗೂ ಮಾಡಬೇಕಾದ ಪ್ರಮುಖ ಪಾತ್ರದದ ಬಗ್ಗೆ ಈ ಪ್ರಾಥಮಿಕ ವಿವರಣದ ಭಾಗ I ರಲ್ಲಿ ವಿವರಿಸಲಾಗಿದೆ.

ಭಾಗ II ರಲ್ಲಿ (ಇನ್ನು ಅಂತಿಮಗೊಳಿಸಿರುವುದಿಲ್ಲ) 2011 ಅಧಿಸೂಚನೆಯ ಪರಿವಿಡಿ ಮತ್ತು ಪ್ರಮುಖವಾದ ವ್ಯವಸ್ಥೆಗಳ ಬಗ್ಗೆ ಮಾಹಿತಿಯನ್ನು ಸರಳವಾಗಿ ನೀಡುತ್ತದೆ.

# ಭಾಗ I

## 1. ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011 ಎಂದರೇನು?

ಭಾರತ ಸರ್ಕಾರದ ಪರಿಸರ (ಸಂರಕ್ಷಣೆ) ಅಧಿನಿಯಮ 1986 ರಡಿ ಹೊರಡಿಸಿರುವ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011 ರ ಪ್ರಕಾರ ರಾಷ್ಟ್ರದ ಕರಾವಳಿ ಪ್ರದೇಶ, 12 ನಾಟಿಕಲ್ ಮೈಲಿಗಳ ಮಿತಿವರೆಗಿನ ಪ್ರಾದೇಶಿಕ ಜಲ (ತಳಭಾಗ ಸೇರಿ) ಪ್ರದೇಶ ಹಾಗೂ ಉಬ್ಬರವಿಳಿತದಿಂದ ಪ್ರಭಾವತ ಜಲಕಾಯಗಳನ್ನು ಕರಾವಳಿ ನಿಯಂತ್ರಣ ವಲಯ ಎಂದು ಘೋಷಿಸುತ್ತದೆ. ಈ ವಲಯದಲ್ಲಿ ಉದ್ಯಮಗಳಿಗೆ, ಕಾರ್ಯಪ್ರವರ್ತನೆಗಳಿಗೆ ಮತ್ತು ಸಂಸ್ಕರಣೆಗಳಿಗೆ ನಿರ್ಬಂಧಗಳನ್ನು ವಿಧಿಸುತ್ತದೆ.

ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 1991 ಬದಲಾಗಿ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011 ನ್ನು ಹೊರಡಿಸಲಾಗಿದೆ. 1991ರ ಅಧಿಸೂಚನೆಗೆ ಮಾಡಿದ ಎಲ್ಲಾ 25 ತಿದ್ದುಪಡಿಗಳನ್ನು, ಹೆಚ್ಚಿನವು 1991 ಅಧಿಸೂಚನೆಯನ್ನು ಸಡಿಲಗೊಳಿಸಿದ್ದು, 2011 ಅಧಿಸೂಚನೆಯಲ್ಲಿ ಕ್ರೋಢಿಕರಿಸಿರುವುದು ಗಮನಾರ್ಹವಾಗಿದೆ. ಇದರಿಂದ ಭಾರತದ ಕರಾವಳಿ ತೀರದ ಸಂರಕ್ಷಣೆಯನ್ನು ಹೆಚ್ಚಿಸುವುದರಲ್ಲಿ ಕರಾವಳಿ ನಿಯಂತ್ರಣ ವಲಯ 2011 ಒಂದು ಹೆಜ್ಜೆ ಹಿಂದುಳಿದಿರುತ್ತದೆ.

### ಅಧಿಸೂಚನೆಯ ನಿರೂಪಿತ ಉದ್ದೇಶಗಳು :

- ಕರಾವಳಿ ಪ್ರದೇಶದಲ್ಲಿ ವಾಸವಾಗಿರುವ ಮೀನುಗಾರರ ಸಮುದಾಯಗಳ ಹಾಗೂ ಇತರ ಸ್ಥಳೀಯ ಸಮುದಾಯಗಳ ಜೀವನೋಪಾಯ ಭದ್ರತೆಯನ್ನು ನಿಶ್ಚಯ ಮಾಡುವುದು;
- ಕರಾವಳಿ ತೀರಗಳ, ಅದರ ವಿಶಿಷ್ಟವಾದ ಪರಿಸರ ಮತ್ತು ಅದರ ಸಮುದ್ರದ ಪ್ರದೇಶಗಳನ್ನು ಸಂರಕ್ಷಿಸುವುದು ಹಾಗೂ ಪರಿರಕ್ಷಿಸುವುದು; ಮತ್ತು
- ಕರಾವಳಿ ಪ್ರದೇಶಗಳ ನೈಸರ್ಗಿಕ ಸಂಕಟಗಳಿಂದ ಉಂಟಾಗುವ ಅಪಾಯಗಳು, ಜಾಗತಿಕ ತಾಪದಿಂದ ಸಮುದ್ರ ಮಟ್ಟದ ಏರಿಕೆಯನ್ನು ಗಣನೆಗೆ ತೆಗೆದುಕೊಂಡು ವೈಜ್ಞಾನಿಕ ತತ್ವಗಳ ಆಧಾರದ ಮೇಲೆ ಸುಸ್ಥಿರ ರೀತಿಯಲ್ಲಿ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು.

### 2011 ಅಧಿಸೂಚನೆ ಕರಾವಳಿ ನಿಯಂತ್ರಣ ವಲಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸುತ್ತದೆ:

ಕರಾವಳಿ ನಿಯಂತ್ರಣ ವಲಯ I (ಜೀವ ಪರಿಸರ ದೃಷ್ಟಿಯಿಂದ ನಾಜೂಕಾದ ಪ್ರದೇಶ), ಕರಾವಳಿ ನಿಯಂತ್ರಣ ವಲಯ II (ನಿರ್ಮಿತ ಪೌರ ಪ್ರದೇಶಗಳು), ಕರಾವಳಿ ನಿಯಂತ್ರಣ ವಲಯ III (ಗ್ರಾಮೀಣ ಪ್ರದೇಶಗಳು) ಮತ್ತು ಕರಾವಳಿ ನಿಯಂತ್ರಣ ವಲಯ IV (ಪ್ರಾದೇಶಿಕ ಜಲ ಸೇರಿದ ಜಲ ಪ್ರದೇಶಗಳು ಮತ್ತು ಉಬ್ಬರವಿಳಿತದಿಂದ ಪ್ರಭಾವಿತವಾದ ಜಲಕಾಯಗಳು)

## 2. ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011 ಮತ್ತು ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 1991 ರ ನಡುವೆ ಇರುವ ಪ್ರಮುಖ ವ್ಯತ್ಯಾಸಗಳೇನು?

- ಪ್ರಾದೇಶಿಕ ಜಲಪ್ರದೇಶಗಳ ಒಳಪಡಿಸುವಿಕೆ: ಒಟ್ಟು ಜಲಪ್ರದೇಶ – 12 ನಾಟಿಕಲೆ ಮೈಲುಗಳ ವರೆಗಿನ ಪ್ರಾದೇಶಿಕ ಜಲ ಮತ್ತು ಸಮುದ್ರದ ತಳ ಪ್ರದೇಶ ಹಾಗೂ ಉಬ್ಬರವಿಳಿತದಿಂದ ಪ್ರಭಾವಿತ ಜಲಕಾಯಗಳ ತೊರೆಗಳು, ನದಿಗಳು ಮತ್ತು ಅಳಿವೆಗಳ ಜಲ ಮತ್ತು ತಳ ಪ್ರದೇಶಗಳನ್ನು 2011 ಅಧಿಸೂಚನೆಯಡಿ ಒಳಪಡಿಸಲಾಗಿದೆ.

- ದ್ವೀಪಗಳಿಗೆ ಪ್ರತ್ಯೇಕ ಅಧಿಸೂಚನೆ: ಅಂಡಮಾನ್ ಮತ್ತು ನಿಕೊಬಾರ್ ಮತ್ತು ಲಕ್ಷದ್ವೀಪ್ ದ್ವೀಪಗಳ ಪ್ರದೇಶಗಳು ಹಾಗೂ ಈ ದ್ವೀಪಗಳ ಸುತ್ತಮುತ್ತ ಇರುವ ಸಮುದ್ರ ಪ್ರದೇಶಗಳು ಅದರ ಪ್ರಾದೇಶಿಕ ಮಿತಿಗೊಳಪಡಿಸಿ 2011 ಅಧಿಸೂಚನೆಯ ಪರಿಧಿಯೊಳಗೆ ಬರುವುದಿಲ್ಲ. ಈ ಪ್ರದೇಶಗಳಿಗೆ ಒಂದು ಪ್ರತ್ಯೇಕವಾದ ದ್ವೀಪಗಳ ಸಂರಕ್ಷಣೆ ವಲಯ ಅಧಿಸೂಚನೆಯನ್ನು ಹೊರಡಿಸಲಾಗಿದೆ.

- ಅಪಾಯ ರೇಖೆ: ಕರಾವಳಿ ಸಮುದಾಯಗಳ ಜೀವ, ಜೀವನೋಪಾಯ ಮತ್ತು ಆಸ್ತಿಯ ಸಂರಕ್ಷಣೆಯ ಉದ್ದೇಶದಿಂದ ಉಬ್ಬರವಿಳಿತ, ಅಲೆಗಳು, ಸಮುದ್ರ ಮಟ್ಟದ ಏರಿಕೆ ಮತ್ತು ತೀರ ರೇಖೆಯ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಂಡು ಅಪಾಯ ರೇಖೆ ಎಂಬ ಪರಿಕಲ್ಪನೆಯನ್ನು ಪರಿಚಯಿಸಲಾಗಿದೆ. ಅಪಾಯ ರೇಖೆಯನ್ನು ಕರಾವಳಿ ವಲಯ ನಿರ್ವಹಣಾ ಯೋಜನೆಗಳಲ್ಲಿ ರೇಖೆಗೊಳಿಸಬೇಕಾಗಿದೆ. ಅಧಿಸೂಚನೆಯೆ ಪ್ರಕಾರ, ಭೂಮಿಯ ಕಡೆಗೆ ಸಮುದ್ರ ಮುಖದುದ್ದಕ್ಕೂ ಸಂಬಂಧಿಸಿದಂತೆ ಉಬ್ಬರ ರೇಖೆಯಿಂದ 500 ಮೀ ಮತ್ತು ಅಪಾಯ ರೇಖೆ ಮಧ್ಯೆ ಬರುವ ಭೂಪ್ರದೇಶ ಮತ್ತು ಉಬ್ಬರವಿಳಿತ ಪ್ರಭಾವಿತ ಜಲನಿಕಾಯಗಳು ಸಂಬಂಧಿಸಿದಂತೆ ಅಪಾಯ ರೇಖೆ ಮತ್ತು 100 ಮೀ ರೇಖೆಯ ಮಧ್ಯೆ ಬರುವ ಭೂಪ್ರದೇಶಗಳು ಕರಾವಳಿ ನಿಯಂತ್ರಣ ವಲಯಕ್ಕೆ ಸೇರಿದೆ. ಕೆಲವು ಪ್ರದೇಶಗಳಲ್ಲಿ ಕರಾವಳಿ ನಿಯಂತ್ರಣ ವಲಯವು 500 ಮೀ ಕರಾವಳಿ ವಲಯಕ್ಕಿಂತ ಆಚೆಗೆ ವಿಸ್ತರಿಸಬಹುದು ಎಂಬುದನ್ನು ಸೂಚಿಸುತ್ತದೆ (ಅಥವಾ ಉಬ್ಬರವಿಳಿತ ಪ್ರಭಾವತ ಜಲನಿಕಾಯಗಳಲ್ಲಿ 100 ಮೀ ವಲಯ).

- ವಿಶೇಷ ಪರಿಗಣನೆ ಬೇಕಾದಂತಹ ಪ್ರದೇಶಗಳು: 1991 ಅಧಿಸೂಚನೆಯಡಿ ಇಡೀ ಭಾರತದ ಕರಾವಳಿ ಪ್ರದೇಶಕ್ಕೆ ಏಕರೂಪದ ನಿಯಂತ್ರಣಗಳನ್ನು ಪಾಲಿಸುತ್ತಿತ್ತು. ಆದರೆ 2011 ಅಧಿಸೂಚನೆಯಡಿ ಪರಿಸರ ಮತ್ತು ಸಾಮಾಜಿಕ ವಿಷಗಳನ್ನು ಗಣನೆಗೆ ತೆಗೆದುಕೊಂಡು ಬೃಹತ್ ಮುಂಬೈ. ಕೇರಳ ಮತ್ತು ಗೋವಾಗೆ ವಿಶೇಷ ನಿಯಮ ವಿಮುಕ್ತಿ ನೀಡಲಾಗಿದೆ.

  ಪರಿಸರ (ಸಂರಕ್ಷಣಾ) ಅಧಿನಿಯ (ಇಪಿಎ), 1986 ರಡಿ ಗುರುತಿಸಲಾದ ಪಶ್ಚಿಮ ಬಂಗಾಲದ ಸುಂದರ್ ಬನ್ ಮತ್ತು ಇತರೆ ಜೀವಿ ದೃಷ್ಟಿಯಿಂದ ಪರಿಸರ ನಾಜೂಕಾದ ಪ್ರದೇಶಗಳಲ್ಲಿ ಅನ್ವಯವಾಗುವಂತೆ ಅತಿ ಹೆಚ್ಚು ಅಪಾಯಕ್ಕೆ ಈಡಾಗಲು ಸಾಧ್ಯತೆಯುಳ್ಳ ಕರಾವಳಿ ಪ್ರದೇಶ (ಸಿವಿಸಿಎ) ಎಂಬ ವಿಭಾಗವನ್ನು ಸಹ ಸೃಜಿಸಲಾಗಿದೆ.

- <u>ವಿಶೇಷ ಆರ್ಥಿಕ ವಲಯಗಳಿಗೆ ಅನುಮತಿ ಇರುವುದಿಲ್ಲ:</u> 2011 ರ ಅಧಿಸೂಚನೆ ಪ್ರಕಾರ ವಿಶೇಷ ಆರ್ಥಿಕ ವಲಯಗಳನ್ನು ಕರಾವಳಿ ನಿಯಂತ್ರಣ ವಲಯಗಳಲ್ಲಿ (ಸಿಆರ್ ಜೆಡ್) ಸ್ಥಾಪಿಸಲು ಅನುಮತಿ ಇರುವುದಿಲ್ಲ.

- <u>ತೀರುವಳಿ ಪಡೆಯಲು ಕಾರ್ಯವಿಧಾನಗಳು:</u> 1991 ಅಧಿಸೂಚನೆಯಲ್ಲಿ ಕರಾವಳಿ ನಿಯಂತ್ರಣ ವಲಯದ ತೀರುವಳಿ ಪಡೆಯಲು ವ್ಯಕ್ತವಾದ ಕಾರ್ಯವಿಧನವನ್ನು ಹಾಗೂ ಸಮಯದ ಗಡುವನ್ನು ಸ್ಪಷ್ಟೀಕರಿಸಿರುವುದಿಲ್ಲ. ಮುಂದುವರೆದು ತೀರುವಳಿ ಅರ್ಜಿಗಳನ್ನು ಸಲ್ಲಿಸಲು ನಿಗಧಿತ ನಮೂನೆಯನ್ನು ನೀಡಿರುವುದಿಲ್ಲ. 2011 ಅಧಿಸೂಚನೆಯಲ್ಲಿ ಸಮಯದ ಗಡುವಿನೊಂದಿಗೆ ತೀರುವಳಿ ಪಡೆಯಲು ಕಾರ್ಯವಿಧಾನಗಳ ಸ್ಥೂಲ ವಿವರಣೆ ನೀಡಲಾಗಿದೆ.

- <u>ಮೇಲ್ವಿಚಾರಣೆ ಮತ್ತು ಅಮಲುಜಾರಿ: 2011</u> ಅಧಿಸೂಚನೆಯಲ್ಲಿ ಉಲ್ಲಂಘನೆಗಳನ್ನು ತಡೆಗಟ್ಟಲು ಅಮಲುಜಾರಿ ವ್ಯವಸ್ಥೆಗಳನ್ನು ಬಲಪಡಿಸಲಾಗಿದೆ. ಮುಂದುವರೆದು, ತೀರುವಳಿ ನಂತರದ ಮೇಲ್ವಿಚಾರಣೆ ವ್ಯವಸ್ಥೆಯನ್ನು ಸ್ಪಷ್ಟವಾಗಿ ವಿವರಿಸಲಾಗಿದೆ.

- <u>ಪಾರದರ್ಶಕತೆ:</u> ಪಾರದರ್ಶಕತೆಯನ್ನು ಹೆಚ್ಚಿಸಲು ಕೆಲವು ಕ್ರಮಗಳನ್ನು ಹಾಗೂ ಸಾರ್ವಜನಿಕ ಸಮಾಲೋಚನೆಗಳಿಗೆ 2011 ಅಧಿಸೂಚನೆಯಲ್ಲಿ ಒಳಪಡಿಸಲಾಗಿದೆ.

- <u>ಸಮುದ್ರಕೊರತೆಗೆ ಪ್ರವಣತೆ ಇರುವ ಪ್ರದೇಶಗಳನ್ನು ಗುರುತಿಸುವುದು:</u> ಮನುಷ್ಯನ ಹಸ್ತಕ್ಷೇಪದಿಂದ ಕರಾವಳಿ ಪ್ರದೇಶಗಳಲ್ಲಿ ಸಮುದ್ರ ಕೊರತೆಯನ್ನು ಅನುಭವಿಸಲಾಗುತ್ತಿದ್ದು, ತೀವ್ರ ಕೊರತೆ ಭಾದೀತ ಪ್ರದೇಶಗಳಲ್ಲಿ ಮುಂಗರೆ ಅಭಿವೃದ್ಧಿಯನ್ನು ನಿಯಂತ್ರಿಸಲು, ಕರಾವಳಿ ತೀರವನ್ನು ತೀವ್ರ ಕೊರೆತ, ಮಧ್ಯಮ ಕೊರೆತ ಮತ್ತು ತಗ್ಗಿದ ಕೊರತೆ ಅಥವಾ ಸ್ಥಿತ ಪ್ರದೇಶ ಎಂದು ವಿಂಗಡಿಸಲು ವಿವರವಾದ ವೈಜ್ಞಾನಿಕ ಅಧ್ಯಯನ ನಡೆಸಲು 2011 ಅಧಿಸೂಚನೆಯಲ್ಲಿ ಪ್ರಸ್ತಾವಿಸಲಾಗಿದೆ.

- <u>ಅಭಿವೃದ್ಧಿ ನಿಷಿದ್ಧ ವಲಯವನ್ನು ನಿರ್ದಿಷ್ಟವಾದ ಉದ್ದೇಶಗಳಿಗೆ ಸಡಿಲಗೊಳಿಸುವುದು:</u> ಅಭಿವೃದ್ಧಿ ನಿಷಿದ್ಧ ವಲಯದ 100 ರಿಂದ 200 ಮೀಟರ್ ಪ್ರದೇಶದಲ್ಲಿ ಕೆಲವು ನಿಭಂದನೆಗಳೊಂದಿಗೆ ಸಾಂಪ್ರದಾಯಿಕ ಕರಾವಳಿ ಸಮುದಾಯಗಳ ವಿಶೇಷವಾಗಿ ಮೀನುಗಾರರ ವಾಸದ ಘಟಕಗಳನ್ನು ನಿರ್ಮಿಸಲು/ ಪುನರ್ ನಿರ್ಮಿಸಲು ವ್ಯವಸ್ಥೆಯನ್ನು ಅಳವಡಿಸಲಾಗಿದೆ.

## 3. 2011 ಅಧಿಸೂಚನೆಯಡಿ ಸವಾಲು ಮಾಡಬೇಕಾದ ಮುಖ್ಯವಾದ ಸಮಸ್ಯಗಳು ಯಾವುವು?

- <u>ಮುಂಗರೆ ಸೌಲಭ್ಯಗಳ ಅಗತ್ಯವಿಲ್ಲದ ಚಟುವಟಿಕೆಗಳಿಗೆ ಅನುಮತಿ:</u> ಜಲಮುಖದೊಂದಿಗೆ ನೇರವಾಗಿ ಸಂಬಂಧವಿಲ್ಲದ ಅಥವಾ ಮುಂಗರೆ ಸೌಲಭ್ಯಗಳ ಅವಶ್ಯಕತೆ ಇಲ್ಲದಿರುವ ಚಟುವಟಿಕೆಗಳಾದ ಉದಾಹರಣೆಗೆ ಮುಂಬೈ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣ ಹಾಗೂ ಅಣುಶಕ್ತಿ ಸ್ಥಾವರಗಳಿಗೆ ಅನುಮತಿ ನೀಡುವುದು 2011 ಅಧಿಸೂಚನೆಯಡಿ ಮುಂದುವರಿಸಲಾಗಿದೆ.

- <u>ಸ್ಟಿಲ್ಟ್ ಅಥವಾ ಕಂಬಗಳ ಮೇಲಿನ ರಸ್ತೆಗಳಿಗೆ ಅನುಮಿತಿ:</u> ಕರಾವಳಿ ನಿಯಂತ್ರಣ ವಲಯದಲ್ಲಿ ಸ್ಟಿಲ್ಟ್ ಅಥವಾ ಕಂಬಗಳ ಮೇಲಿನ ರಸ್ತೆಗಳನ್ನು ನಿರ್ಮಿಸಲು ವ್ಯವಸ್ಥೆ ಇರುತ್ತದೆ. ಅವ್ಯಕ್ತವಾಗಿರುವ ಈ ವ್ಯವಸ್ಥೆಯನ್ನು ದುರೂಪಯೋಗ ಪಡಿಸುವ ಸಾಧ್ಯತೆ ಇರುತ್ತದೆ. ಇದರಿಂದಾಗಿ ಪ್ರಮುಖ ಯೋಜನೆಗಳಾದ ಎಕ್ಸ್ ಪ್ರೆಸ್ ಹೈವೇ ಮತ್ತು ಫ್ಲೈ ಓವರ್‌ಗಳನ್ನು ಜೀವಿಪರಿಸರ ನಾಜೂಕಾ ಕರಾವಳಿ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲು ಸಾಧ್ಯತೆ ಇರುತ್ತದೆ. ಚೆನ್ನೈ ಮತ್ತು ಮುಂಬೈಯಲ್ಲಿ ಈಗಾಗಲೇ ಅನುಷ್ಠಾನವಾಗುತ್ತಿದೆ.

- <u>ರಾಷ್ಟ್ರ ಮತ್ತು ರಾಜ್ಯ ಮಟ್ಟದ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಗಳಲ್ಲಿ ಮೀನುಗಾರಿಕೆ ಸಮುದಾಯಗಳ ಪ್ರಾತಿನಿಧ್ಯ ಇಲ್ಲ:</u> ರಾಷ್ಟ್ರ ಮತ್ತು ರಾಜ್ಯ ಮಟ್ಟದ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಗಳಲ್ಲಿ ಮೀನುಗಾರಿಕೆ ಸಮುದಾಯಗಳ ಪ್ರಾತಿನಿಧ್ಯ ಇರುವುದಿಲ್ಲ. ಇಂತಹ ಪ್ರಾತಿನಿಧ್ಯ ನೀಡಬೇಕೆಂಬುದು ಮೀನುಗಾರಿಕೆ ಸಮುದಾಯ ಸಂಸ್ಥೆಗಳ ದೀರ್ಘ ಕಾಲದ ಬೇಡಿಕೆಯಾಗಿರುತ್ತದೆ. ಈ ಪ್ರಾತಿನಿಧ್ಯವಿಲ್ಲದೆ ಕರಾವಳಿಯ ನೈಸರ್ಗಿಕ ಸಂಪನ್ಮೂಲಗಳ ದೊಡ್ಡ ಪಣಒಡ್ಡುವವರು ಮತ್ತು ಸಹಜ ಅಭಿರಕ್ಷಕರಾದ ಮೀನುಗಾರಿಕೆ ಸಮುದಾಯಗಳು ಕರಾವಳಿ ತಿರಗಳ ನಿರ್ವಹಣೆಯಲ್ಲಿ ತಮ್ಮ ನ್ಯಾಯವಾದ ಪಾತ್ರವನ್ನು ವಹಿಸುವಲ್ಲಿ ಬಹಿಷ್ಕರಿಸಿದಂತಾಗುತ್ತದೆ.

  ಸದರಿ ಅಧಿಸೂಚನೆಯ ಮೇಲ್ವಿಚಾರಣೆ ಮತ್ತು ಅಮಲುಜಾರಿಗೆ ಸಹಾಯಮಾಡಲು, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗುವ ಜಿಲ್ಲಾ ಮಟ್ಟದ ಸಮಿತಿಗಳಲ್ಲಿ ಮಾತ್ರ ಸ್ಥಳೀಯ ಸಾಂಪ್ರದಾಯಿಕ ಸಮುದಾಯಗಳು ವಿಶೇಷವಾಗಿ ಮೀನುಗಾರರ ಪ್ರಾತಿನಿಧ್ಯಕ್ಕೆ ಅವಕಾಶವಿರುತ್ತದೆ.

- <u>ಅಭಿವೃದ್ಧಿ ನಿಷಿದ್ಧ ವಲಯದಲ್ಲಿ ನಿರ್ಮಾಣ/ಪುನರ್ ನಿರ್ಮಾಣಕ್ಕೆ ಅನುಮತಿ ನೀಡುವ ವ್ಯವಸ್ಥೆಯು ಸಮಸ್ಯಕರ:</u> ಕರಾವಳಿ ನಿಯಂತ್ರಣ ವಲಯ **III** (**100** ರಿಂದ **200** ಮಿ ಮಧ್ಯೆ) ರ ಅಭಿವೃದ್ಧಿ ನಿಷಿದ್ಧ ವಲಯದಲ್ಲಿ ಕೆಲವು ನಿಭಂದನೆಗಳೊಂದಿಗೆ ಸಾಂಪ್ರದಾಯಿಕ ಕರಾವಳಿ ಸಮುದಾಯಗಳು ವಿಶೇಷವಾಗಿ ಮೀನುಗಾರರ ವಾಸದ ಘಟಕಗಳನ್ನು ನಿರ್ಮಿಸಲು/ ಪುನರ್ ನಿರ್ಮಿಸಲು ಅನುಮತಿ ನೀಡುವ ವ್ಯವಸ್ಥೆಯು ಸಮಸ್ಯಕರವಾಗಿದೆ. ಈ ಅವಕಾಶವನ್ನು ಎಲ್ಲಾ ಸಾಂಪ್ರದಾಯಿಕ ಕರಾವಳಿ ಸಮುದಾಯಗಳಿಗೆ ಅನ್ವಯವಾಗುವಂತೆ ಮಾಡಿರುವುದರಿಂದ ಸದರಿ ಅಧಿಸೂಚನೆಯು ದುರುಪಯೋಗಕ್ಕೆ ಅವಕಾಶ ನೀಡಿ, ನಿರ್ಮಾಣಗಳ ಸಾಂದ್ರತೆಯನ್ನು ಹೆಚ್ಚಿಸಿ, ಕರಾವಳಿ ನಿಯಂತ್ರಣ ವಲಯ **III** ಪ್ರದೇಶದ ಅಭಿವೃದ್ಧಿ ನಿಷಿದ್ಧ ವಲಯದ ಕರಾವಳಿ ಸಂಪನ್ಮೂಲಗಳ ಮೇಲೆ ಒತ್ತಡವುಂಟಾಗುತ್ತಿದೆ. ಮೀನುಗಾರಿಕೆ ಸಮುದಾಯಗಳು ಅವರ ವೃತ್ತಿಯ ವಿಶೇಷತೆಯಿಂದ ಕರಾವಳಿಯಲ್ಲಿ ವಾಸಿಸಬೇಕಾಗಿದ್ದುದರಿಂದ ವಿಶೇಷವಾದ ಪ್ರಕರಣಗಳಲ್ಲಿ ಅಂದರೆ ಮೀನುಗಾರಿಕೆ ಸಮುದಾಯ ಹಳ್ಳಿಗಳನ್ನು ವಿಸ್ತರಿಸಲು ಯಾವುದೇ ಅವಕಾಶವಿಲ್ಲದ ಸಂದರ್ಭಗಳಲ್ಲಿ ಮಾತ್ರ ಮೀನುಗಾರಿಕೆ ಸಮುದಾಯ ಸಂಸ್ಥೆಗಳು ಇಂತಹ ವ್ಯವಸ್ಥೆಗಳನ್ನು ಕೋರಿರುತ್ತಾರೆ.

- <u>ಅತಿಹೆಚ್ಚು ಅಪಾಯಕ್ಕೆ ಸಾಧ್ಯತೆಯುಳ್ಳ ಕರಾವಳಿ ಪ್ರದೇಶಗಳು ಸಮಸ್ಯಕರ:</u> ಅತಿಹೆಚ್ಚು ಅಪಾಯಕ್ಕೆ ಸಾಧ್ಯತೆಯುಳ್ಳ ಕರಾವಳಿ ಪ್ರದೇಶಗಳಿಗೆ ಸಂಭಂದಿಸಿದ ಪ್ರಸ್ತಾವನೆಯು ಮೇಲಿಂದ ಕೆಳಗೆ ಬರುವ ನಿರ್ವಹಣಾ ಸಮೀಪಮಾರ್ಗವನ್ನು ಅನುಸರಿಸುತ್ತಿದ್ದು, ಅವುಗಳ ನೇಮಕ ಮತ್ತು ನಿರ್ವಹಣೆಯಲ್ಲಿ

ಸ್ಥಳಿಯ ಸಮುದಾಯಗಳಿಗೆ ಪಾತ್ರ ಸೀಮಿತಗೊಳಿಸಿರುವುದು ಅಪಾಯಕಾರಿಯಾಗಿದೆ. ಮೀನುಗಾರಿಕೆ ಸಮುದಾಯ ಸಂಸ್ಥೆಗಳು ಇದರ ಬದಲಾಗಿ ಸಮುದಾಯದಿಂದ ನಿರ್ವಹಿಸಲ್ಪಡುವ ಕರಾವಳಿ ಮೀಸಲುಗಳಿಗೆ **(CMCRs)** ಕೋರಿರುತ್ತಾರೆ.

- ಮುಂಬೈಯಲ್ಲಿ ಕೇರಿಯ ಪುನರ್ ಅಭಿವೃದ್ಧಿ: ಮುಂಬೈಗೆ ಇರುವ ವಿಶೇಷ ನಿಯಮ ವಿಮುಕ್ತಿಯಡಿ ಹೆಚ್ಚಿನ ನೆಲ ವಿಸ್ತೀರ್ಣ ಸೂಚಿಕೆಯೊಂದಿಗೆ **(Floor Space Index)** ಕೇರಿಗಳ ಪುನರ್ ಅಭಿವೃದ್ಧಿಗೆ ಅನುಮತಿ ನೀಡಲಾಗಿದೆ. ಕೇರಿ ಪುನರ್‌ವಸತಿಯನ್ನು ಕಾಂಡ್ಲಾವನ ಪ್ರದೇಶಗಳು ಸೇರಿದಂತೆ ಸಮುದ್ರ ಮಟ್ಟದ ಏರಿಕೆಯ ಬೆದರಿಕೆ ಇರುವ ತೀವ್ರ ಭೇಧ್ಯಪ್ರದೇಶಗಳಲ್ಲಿ ಅನುಮತಿ ನೀಡಿರುವುದು ಪ್ರಶ್ನಾರ್ಹವಾಗಿದೆ. ಹೆಚ್ಚಿನ ನೆಲ ವಿಸ್ತೀರ್ಣ ಸೂಚಿಕೆಯನ್ನು **(Floor Space Index)** ಕೇರಿ ವಾಸಿಗಳ ಪ್ರಯೋಜನಕ್ಕಾಗಿ ನೀಡಿರುವುದಿಲ್ಲ ಬದಲಿಗೆ ಖಾಸಗಿ ಕಟ್ಟಡ ನಿರ್ಮಾಪಕರಿಗೆ ಅಪಾರ್ಟ್‌ಮೆಂಟ್‌ಗಳನ್ನು ಹೊರಗಿನವರಿಗೆ ಮಾರಲು ಲಾಭಗಳಿಸಲು ಅವಕಾಶ ನೀಡಲು ಒದಗಿಸಲಾಗಿರುತ್ತದೆ. ಇಂತಹ ಸೌಲಭ್ಯಗಳಿಂದ ಮುಂಬೈಯ ಕರಾವಳಿಯಲ್ಲಿ ನಿರ್ಮಾಣಗಳ ಸಾಂದ್ರತೆಯನ್ನು ಹೆಚ್ಚಿಸಲು ಸಾಧ್ಯತೆ ಇದೆ.
- ಪ್ರಾದೇಶಿಕ ಪರಿಸರದ ಮೇಲಿನ ಪರಣಾಮ ಮೌಲ್ಯಮಾಪನಗಳನ್ನು ತಯಾರಿಸಲು ಅವಕಾಶವಿಲ್ಲ: **2011** ಅಧಿಸೂಚನೆಯಲ್ಲಿ ವೈಯಕ್ತಿಕ ಯೋಜನೆಗೆ ಅನುಮತಿಯನ್ನು ಪ್ರಾದೇಶಿಕ ಪರಿಸರದ ಮೇಲಿನ ಪರಿಣಾಮ ಮೌಲ್ಯಮಾಪನಗಳ ಆಧಾರದ ಮೇಲೆ ನೀಡುವ ಬಗ್ಗೆ ಯಾವುದೇ ವ್ಯವಸ್ಥೆಗಳನ್ನು ಮಾಡಿರುವುದಿಲ್ಲ. ತೀರದ ಸಾಮರ್ಥ್ಯದ ಪರಿಮಿತಿಯನ್ನು ಮನಸ್ಸಿನಲ್ಲಿಟ್ಟು, ಹಾಲಿ ಇರುವ ಹಾಗೂ ಪ್ರಸ್ತಾವಿತ ವಿವಿಧ ಯೋಜನೆಗಳಿಂದ ಪರಿಸರದ ಮಾಲೆ ಉಂಟಾಗುವ ಸಂಚಿತ ಪರಿಣಾಮವನ್ನು ಗಣನೆಗೆ ತೆಗೆದುಕೊಂಡು ಇಂತಹ ವ್ಯವಸ್ಥೆಗಳನ್ನು ಮಾಡುವುದು ಅತಿಅವಶ್ಯವಾಗಿತ್ತು.
- ಕರಾವಳಿ ವಲಯ ನಿರ್ವಹಣಾ ಯೋಜನೆಗಳನ್ನು ಪದೇ ಪದೇ ಪರಿಷ್ಕರಿಸಲು ಅನುಮತಿ: ಕರಾವಳಿ ವಲಯ ನಿರ್ವಹಣಾ ಯೋಜನೆಗಳನ್ನು ಐದು ವರ್ಷಗಳ ನಂತರ (ಅಥವಾ ಇನ್ನು ಕಡಿಮೆ) ಪರಿಷ್ಕರಿಸಲು ಅಧಿಸೂಚನೆಯು ಅನುಮತಿ ನೀಡುತ್ತದೆ. ಕರಾವಳಿ ವಲಯ ನಿರ್ವಹಣಾ ಯೋಜನೆಗಳನ್ನು ಹತ್ತು ವರ್ಷಗಳಿಗೊಮ್ಮೆ ಮಾತ್ರ ಪರಿಷ್ಕರಿಸುವುದು ಮೀನು ಕಾರ್ಮಿಕರ ಸಂಸ್ಥೆಗಳ ಬೇಡಿಕೆಯಾಗಿತ್ತು. ಪದೇ ಪದೇ ಪರಿಷ್ಕರಣೆ ಮಾಡಿದಲ್ಲಿ ಕರಾವಳಿ ಪ್ರದೇಶಗಳ ಮರುವಿಂಗಡನೆಗೆ ಮತ್ತು ನಿಯಂತ್ರಣ ರೂಪರೇಷಗಳನ್ನು ದುರ್ಬಲಗೊಳಿಸಲು ಅವಕಾಶ ನೀಡಿದಂತಾಗುತ್ತದೆ.
- ಮರು ವಲಯೀಕರಣ ಸಾಧ್ಯತೆ ಉಳಿಯುತ್ತದೆ: ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಕ್ಕೆ ಪ್ರಸ್ತಾವನೆಗಳನ್ನು ಒಪ್ಪಿಸಿ ಕರಾವಳಿ ವಲಯ **III** ಪ್ರದೇಶಗಳನ್ನು (ಪ್ರಾಥಮಿಕವಾಗಿ ಗ್ರಾಮೀಣ ಪ್ರದೇಶಗಳು) ಕರಾವಳಿ ವಲಯ **II** ಪ್ರದೇಶಗಳಾಗಿ ( ನಿರ್ಮಾಣ ಮತ್ತು ಇತರೆ ಅಭಿವೃದ್ಧಿಗೆ ಕಡಿಮೆ ನಿಯಂತ್ರಣಗಳಿರುವ ನಿರ್ಮಿಸಲ್ಪಟ್ಟ ಪ್ರದೇಶಗಳು) ಮರವಿಂಗಡನೆ ಮಾಡುವಂತೆ ಕೋರಲು ಸಾಧ್ಯತೆ ಉಳಿಯುತ್ತದೆ ಎಂಬುದು ಮತ್ತೊಂದು ಸಮಸ್ಯೆಯಾಗಿದೆ. **1991** ರ ಅಧಿಸೂಚನೆಯಡಿ ಕರಾವಳಿ ವಲಯ **III** ರಿಂದ ಕರಾವಳಿ ವಲಯ **II** ಕ್ಕೆ ಮರುವಿಂಗಡನೆಗೊಳಿಸುವ ಬಗ್ಗೆ ಹಲವಾರು ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿದ್ದು, ಕರಾವಳಿಯಲ್ಲಿ ನಿರ್ಮಾಣಗಳ ಸಾಂದ್ರತೆಯನ್ನು ಹೆಚ್ಚಿಸಿ

ಅಧಿಸೂಚನೆಯ ಮುಖ್ಯ ಉದ್ದೇಶಗಳನ್ನು ಕೆಳಗಾಣಿಸಲಾಗಿರುತ್ತದೆ. ಇದರಿಂದ ಮರುವಿಂಗಡನೆಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಪರಿಶೀಲಿಸುವ ರಾಜ್ಯ/ ಕೇಂದ್ರಾಡಳಿತ ಮತ್ತು ರಾಷ್ಟ್ರ ಮಟ್ಟದ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಗಳಲ್ಲಿ ಮೀನುಗಾರಿಕೆ ಸಮುದಾಯಗಳ ಪ್ರಾತಿನಿಧ್ಯದ ಪ್ರಾಮುಖ್ಯತೆಗೆ ಒತ್ತು ನೀಡುತ್ತದೆ.

## 4. ಮೀನುಗಾರಿಕೆ ಸಮುದಾಯಗಳಿಗೆ ಕರಾವಳಿ ನಿಯಂತ್ರಣ ವಲಯ 2011 ರಲ್ಲಿ ಫಲಪ್ರಧವಾಗಿರಬಹುದಾದ ವ್ಯವಸ್ಥೆಗಳು ಯಾವುವು.

2011 ಅಧಿಸೂಚನೆಯಡಿ ಕೆಲವು ವ್ಯವಸ್ಥೆಗಳು ಮಿನುಗಾರಿಕೆ ಸಮುದಾಯಗಳಿಗೆ ಉಪಯೋಗವಿರುವ ಸಾಧ್ಯತೆ ಇದೆ. ಸಮುದಾಯಗಳು  ಇಂತಹ ವ್ಯವಸ್ಥೆಗಳ ಬಗ್ಗೆ ಪರಿಚಿತರಾಗಿರುವುದ ಮುಖ್ಯ.

<u>ನಿರ್ಣಯ ತೆಗೆದುಕೊಳ್ಳುವಲ್ಲಿ ಮೀನುಗಾರಿಕೆ ಸಮುದಾಯಕ್ಕೆ ಪ್ರಾತಿನಿಧ್ಯ:</u>

- <u>ಜಿಲ್ಲಾ ಮಟ್ಟದ ಪ್ರಾತಿನಿಧ್ಯ:</u> ಸದರಿ ಅಧಿಸೂಚನೆಯ ಮೇಲ್ವಿಚಾರಣೆ ಮತ್ತು ಅಮಲುಜಾರಿಗೆ ಸಹಾಯಮಾಡಲು, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗುವ ಜಿಲ್ಲಾ ಮಟ್ಟದ ಸಮಿತಿಗಳಲ್ಲಿ ಮಾತ್ರ ಸ್ಥಳೀಯ ಸಾಂಪ್ರದಾಯಿಕ ಸಮುದಾಯಗಳು ವಿಶೇಷವಾಗಿ ಮೀನುಗಾರರ ಪ್ರಾತಿನಿಧ್ಯಕ್ಕೆ 2011 ರ ಅಧಿಸೂಚನೆಯಲ್ಲಿ ವ್ಯವಸ್ಥೆ ಇರುತ್ತದೆ. ಮೇಲ್ವಿಚಾರಣೆ (ಮಾನಿಟರಿಂಗ್) ಮತ್ತು ಅಮಲುಜಾರಿಗೊಳಿಸುವಿಕೆಯು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶದ ಮಟ್ಟದ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದ ಪ್ರಾಥಮಿಕ ಜವಾಬ್ದಾರಿಯಾಗಿರುತ್ತದೆ.

<u>ಯೋಜನಾ ಕ್ರಮಗಳಲ್ಲಿ ಮೀನುಗಾರಿಕೆ ಸಮುದಾಯದ ಬಾಗವಹಿಸುವಿಕೆ</u>

- <u>ಕರಾವಳಿ ವಲಯ ನಿರ್ವಹಣಾ ಯೋಜನೆ ಕ್ರಮಗಳಲ್ಲಿ ಭಾಗವಹಿಸುವುದು:</u> ಕರಾವಳಿ ವಲಯ ನಿರ್ವಹಣಾ ಯೋಜನೆಗಳನ್ನು ಅಂತಿಮವಾಗಿ ಅನುಮೋದಿಸುವ ಮುನ್ನ ತಯಾರಿಕೆಯ ವಿವಿಧ ಹಂತಗಳಲ್ಲಿ ಸಮಾಲೋಚನೆ ಪ್ರಕ್ರಿಯೆಗಳ ಮೂಲಕ ತಯಾರಿಸಬೇಕಾಗಿದೆ ಎಂದು 2011 ಅಧಿಸೂಚನೆಯಲ್ಲಿ  ವ್ಯವಸ್ಥೆ ಮಾಡಲಾಗಿದೆ. ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಗಳು ಪಣ ಒಡ್ಡುವವರನ್ನು ಆಹ್ವಾನಿಸಿ ಅವರ ಅಭಿಪ್ರಯಾಗಳನ್ನು ಕರಡು ಕರಾವಳಿ ವಲಯ ನಿರ್ವಹಣಾ ಯೋಜನೆಗಳಲ್ಲಿ ಸೇರಿಸಬೇಕಾಗಿರುತ್ತದೆ. ***[ಪ್ಯಾರಾ 5 (ii), (vi), (vii), (viii); ಅನುಬಂಧ 1, ಪ್ಯಾರಾ IV]***. ಇದರಿಂದ ಕರಾವಳಿ ವಲಯ ನಿರ್ವಹಣಾ ಯೋಜನೆಗಳ ತಯಾರಿಕೆಯಲ್ಲಿ ಮೀನುಗಾರಿಕೆ ಸಮುದಾಯಗಳಿಗೆ ಹೇಳಿಕೆಗೆ ಅವಕಾಶ ನಿಡಿದಂತಾಗುತ್ತದೆ.

  ಮೀನುಗಾರಿಕೆ ಗ್ರಾಮಗಳನ್ನು ಹಾಗು ಮೀನುಗಾರಿಕೆ ಸಮುದಾಯಗಳು ತಮ್ಮ ಜೀವನೋಪಾಯಕ್ಕೆ ಮತ್ತು ಇತರೆ ಅವಶ್ಯಕತೆಗಳಿಗೆ ಉಪಯೋಗಿಸುವ ಸಮಾನ್ಯ ಆಸ್ತಿಗಳ (ಜೆಟ್ಟಿಗಳು, ಮೀನು ಒಣಗಿಸುವ ಪ್ರದೇಶಗಳು ಮತ್ತು ಮೀನುಗಾರಿಕೆ ಮತ್ತು ಸ್ಥಳೀಯ ಸಮುದಾಯಗಳ ಇತರೆ ಮೂಲಭೂತ ಸೌಕರ್ಯಗಳು) ನಕಾಶೆಯನ್ನು ಕರಾವಳಿ ವಲಯ ನಿರ್ವಹಣಾ ಯೋಜನಗಳು

ಹೊಂದಿರಬೇಕು. ***[ಅನುಬಂಧ I, ಪ್ಯಾರಾ II, 7]***. ಕರಾವಳಿ ವಲಯ ನಿರ್ವಹಣಾ ಯೋಜನಗಳು ವಾಸ್ತವಿಕ ಭೂಮಿ ಉಪಯೋಗದ ನಮೂನೆಯನ್ನು ಪ್ರತಿಬಿಂಬಿಸುವುದನ್ನು ಮೀನುಗಾರಿಕೆ ಸಮುದಾಯಗಳು ನಿಶ್ಚಯ ಮಾಡಬಹುದಾಗಿದೆ ಹಾಗೂ ಇತರೆ ವಲಯಗಳು ಮೀನುಗಾರಿಕೆ ಸಮುದಾಯಗಳನ್ನು ಸ್ಥಳಾಂತರಿಸಿ ತಮ್ಮ ಜಾಗಗಳನ್ನು ಅಹಹರಿಸುವ ಸಂದರ್ಭಗಳಲ್ಲಿ ಕರಾವಳಿ ವಲಯ ನಿರ್ವಹಣಾ ಯೋಜನಗಳನ್ನು ತಮ್ಮ ಆಸಕ್ತಿಯನ್ನು ಕಾಪಾಡಿಕೊಳ್ಳಲು ಉಪಯೋಗಿಸಲು ಇದರಿಂದ ಒಳ್ಳೆಯ ಅವಕಾಶವಾಗುತ್ತದೆ.

- <u>ಮೀನುಗಾರಿಕೆ ಗ್ರಾಮಗಳಿಗೆ ಯೋಜನೆ:</u> ಮೂಲ ಸೌಕರ್ಯಗಳಾದ ನೈರ್ಮಲ್ಯ ವ್ಯವಸ್ಥೆ, ಸುರಕ್ಷತೆ ಮತ್ತು ದುರಂತಕ್ಕೆ ಅವರ ಸಿದ್ದತೆ, ವಿಸ್ತರಣೆ ಮತ್ತು ಇತರೆ ಅವಶ್ಯಕತೆಗಳನ್ನು ಗಣನೆಗೆ ತೆಗದುಕೊಂಡು, ಕರಾವಳಿ ಮೀನುಗಾರಿಕೆ ಸಮುದಾಗಳ ದೀರ್ಘಾವಧಿ ವಸತಿ ಅವಶ್ಯಕತೆಗಳ ಕುರಿತು ವಿವರವಾದ ಯೋಜನೆಯನ್ನು ಎಲ್ಲಾ ರಾಜ್ಯ ಸರ್ಕಾರಗಳು ತಯಾರಿಸಲು ಕರಾವಳಿ ವಲಯ ನಿರ್ವಹಣಾ ಯೋಜನೆಗಳ ತಯಾರಿಕೆ ಸಂಬಂಧಿಸಿದ ಮಾರ್ಗಸೂಚಿಯ ಅನುಬಂಧ 1 ರಲ್ಲಿ ಸೂಚಿಸಲಾಗಿದೆ. ಮೀನುಗಾರಿಕೆ ಸಮುದಾಯಗಳು ಈ ಅವಕಾಶವನ್ನು ತಮ್ಮ ಗ್ರಾಮಗಳ ಯೋಜಿತ ಅಭಿವೃದ್ಧಿಗಾಗಿ ಹಾಗೂ ವಸತಿ ಸೌಕರ್ಯ ಉತ್ತಮಪಡಿಸಲು ತಮ್ಮ ರಾಜ್ಯ / ಕೇಂದ್ರಾಡಳಿತ ಸರ್ಕಾರಗಳೊಂದಿಗೆ ಕಾರ್ಯನಿರ್ವಹಿಸಿ ಅನುಷ್ಠಾನಗೊಳಿಸಲು ನಿಶ್ಚಯ ಮಾಡುವುದು. [ಅನುಬಂಧ 1, ಪ್ಯಾರಾ II (7)]

<u>ಮೀನುಗಾರಿಕೆ ಸಮುದಾಯದ ವಸತಿ ಮತ್ತು ಸಂಬಂಧಿತ ಸೌಕರ್ಯಗಳು</u>

- <u>ವಾಸದ ಘಟಕಗಳ ಸಕ್ರಮೀಕರಣ:</u> ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 1991 ರಡಿ ಅನುಮತಿ ನೀಡಿದ ಆದರೆ ಔಪಚಾರಿಕ ಅನುಮೋದನೆ ಪಡೆಯದಂತ ಮೀನುಗಾರಿಕೆ ಸಮುದಾಯಗಳ ವಾಸದ ಘಟಕಗಳನ್ನು ಈ ಕೆಳಗಿನ ಷರತ್ತುಗಳೊಂದಿಗೆ ಸಕ್ರಮೀಕರಣಗೊಳಿಸಲಾಗುವುದು: (i) ಅದನ್ನು ಯಾವುದೇ ವಾಣಿಜ್ಯ ಚಟುವಟಿಕೆಗಳಿಗೆ ಉಪಯೋಗಿಸದಿದ್ದಲ್ಲಿ, ಮತ್ತು (ii) ಅವುಗಳನ್ನು ಸಾಂಪ್ರದಾಯಿಕವಲ್ಲದ ಕರಾವಳಿ ಸಮುದಾಯಕ್ಕೆ ಮಾರದಿದ್ದಲ್ಲಿ ಅಥವಾ ವರ್ಗಾಯಿಸದಿದ್ದಲ್ಲಿ [ಪ್ರಾರಾ 6 (d)] ಸಕ್ರಮೀಕರಣದ ಈ ವ್ಯವಸ್ಥೆ ಮೀನುಗಾರಿಕೆ ಸಮುದಾಯಗಳಿಗೆ ಉಪಯುಕ್ತವಾಗುತ್ತದೆ.
- <u>ವಾಸದ ಘಟಕಗಳ ಪುನರ್ ನಿರ್ಮಾಣ/ ದುರಸ್ತಿ:</u> ಸ್ಥಳಿಯ ಸಮುದಾಯಗಳ ವಿಶೇಷವಾಗಿ ಮೀನುಗಾರರ ವಾಸದ ಘಟಕಗಳ ಪುನರ್ ನಿರ್ಮಾಣ, ದುರಸ್ತಿ ಕಾಮಗಾರಿಗಳು ಪಟ್ಟಣ ಅಥವಾ ಹಳ್ಳಿಗಾಡು ಯೋಜನಾ ನಿಯಂತ್ರಣಗಳ ಅನುಸಾರ ಕರಾವಳಿ ನಿಯಂತ್ರಣ ವಲಯದಲ್ಲಿ ಕೈಗೊಳ್ಳಲು ಅನುಮತಿ ನೀಡಲಾಗಿದೆ.[ಪ್ಯಾರಾ 3 (e)]
- <u>ಕರಾವಳಿ ನಿಯಂತ್ರಣ ವಲಯ III ರಲ್ಲಿ 200 ರಿಂದ 500 ಮೀ ಒಳಗೆ ವಾಸದ ಘಟಕಗಳ ನಿರ್ಮಾಣ / ಪುನರ್ ನಿರ್ಮಾಣ:</u> ವಾಸದ ಸ್ಥಳಗಳು ಸಾಂಪ್ರದಾಯಿಕ ಹಕ್ಕುಗಳು ಮತ್ತು ರೂಢ ಉಪಯೋಗದ ಪರಿಮಿತಯಲ್ಲಿದ್ದರೆ ಅವುಗಳನ್ನು 200 ರಿಂದ 500 ಮೀ ಒಳಗೆ ನಿರ್ಮಿಸಲು/ ಪುನರ್ ನಿರ್ಮಿಸಲು 1991 ಅಧಿಸೂಚನೆಯಂತೆ ಅನುಮತಿಸಲಾಗಿದೆ. ಇಂತಹ ನಿರ್ಮಾಣ / ಪುನರ್ ನಿರ್ಮಾಣಗಳನ್ನು ಕಟ್ಟುವ ಅನುಮತಿಯನ್ನು ಪಟ್ಟಣ ಮತ್ತು ಹಳ್ಳಿಗಾಡು ಯೋಜನಾ

ನಿಯಮಗಳಿಗೆ ಒಳಪಟ್ಟು ನೀಡಲಾಗುವುದು. ಕಟ್ಟಡವು 2 ಅಂತಸ್ತು (ನೆಲ ಮತ್ತು ಒಂದು ಮಹಡಿ) ಇದ್ದು ಪೂರ್ಣ ಎತ್ತರ 9 ಮಿಟರ್‌ಗಳನ್ನು ಮೀರತಕ್ಕದ್ದು ***[ಪ್ಯಾರಾ 8, III ((ಸಿಆರ್‌ಜೆಡ್ III), ಬಿ (vii)].*** ಅದಾಗ್ಯೂ, ಇಂತಹ ನಿರ್ಮಾಣ / ಪುನರ್ ನಿರ್ಮಾಣಗಳ ಇತರೆ ನಿಬಂಧನಗಳನ್ನು ಸಡಿಲಗೊಳಿಸಿದೆ. ಹಾಲಿ ಇರುವ ವಾಸದ ಘಟಕಗಳ ಎರಡರಷ್ಟಿನ ಮೇಲೆ ಒಟ್ಟು ವಾಸದ ಘಟಕಗಳಿದ್ದಲ್ಲಿ ಹಾಗೂ ಎಲ್ಲಾ ಅಂತಸ್ತುಗಳ ಒಟ್ಟು ಪ್ರದೇಶ ಸೈಟಿನ ಶೇ 33 ರಷ್ಟು ಮೀರದಿದ್ದಲ್ಲಿ ಮಾತ್ರ ಅನುಮತಿ ನಿಡಲಾಗುವುದು ಎಂಬ ಷರತ್ತನ್ನು 2011 ರ ಅಧಿಸೂಚನೆಯಲ್ಲಿ ಇನ್ನು ಮುಂದೆ ಇರುವುದಿಲ್ಲ.

- <u>ಕರಾವಳಿ ನಿಯಂತ್ರಣ ವಲಯ III ರ ಅಭಿವೃದ್ಧಿ ನಿಷಿದ್ಧ ವಲಯವನ್ನು ಸಡಿಲಗೊಳಿಸುವುದು:</u> ಸಾಂಪ್ರದಾಯಿಕ ಕರಾವಳಿ ಸಮುದಾಯಗಳ ವಿಶೇಷವಾಗಿ ಮೀನುಗಾರರ ವಾಸದ ಘಟಕಗಳನ್ನು 100 ಮೀ ರಿಂದ 200 ಮೀ ಮಧ್ಯೆ ನಿರ್ಮಾಣ / ಪುನರ್ ನಿರ್ಮಾಣ ಮಾಡಲು ಅಭಿವೃದ್ಧಿ ನಿಷಿದ್ಧ ವಲಯದ ಸಡಿಲಿಕೆ ವ್ಯವಸ್ಥೆಗಳನ್ನು ಪರಿಚಯಿಸಲಾಗಿದೆ. ಆದರೆ ಇದನ್ನು ರಾಜ್ಯ / ಕೇಂದ್ರಾಡಳಿತ ಪ್ರದೇಶದ ಸರ್ಕಾರ, ಸಾಂಪ್ರದಾಯಿಕ ಕರಾವಳಿ ಸಮುದಾಯಗಳು ವಿಶೇಷವಾಗಿ ಮೀನುಗಾರರೊಂದಿಗೆ ಸಮಾಲೋಚಿಸಿ ನೈರ್ಮಲ್ಯ ವ್ಯವಸ್ಥೆ ಮತ್ತು ದುರಂತ ನಿರ್ವಹಣೆ ಕುರಿತು ಅಗತ್ಯ ವ್ಯವಸ್ಥೆಗಳನ್ನು ಸೇರಿಸಿದ ಅನುಮೋದಿತ ಸಮಗ್ರ ಯೋಜನೆಯ ಆಧಾರದ ಮೇಲೆ ಮಾಡಬೇಕಾಗಿದ ***[ಪ್ಯಾರಾ 8, III (ಸಿಆರ್‌ಜೆಡ್ III), ಎ (ii)].*** ್. ಆದರೂ, ಈಗಾಗಲೇ ತಿಳಿಸಿದಂತೆ, ಅಭಿವೃದ್ಧಿ ನಿಷಿದ್ಧ ವಲಯದ ಸಡಲಿಕೆಯಿಂದ 100 ರಿಂದ 200 ಮೀ ವಲಯದಲ್ಲಿ ಅನಗತ್ಯ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡದಂತೆ ಎಚ್ಚರಿಕೆಯಿಂದ ಇರಬೇಕು.

- <u>ಅಭಿವೃದ್ಧಿ ನಿಷಿದ್ಧ ವಲಯದಲ್ಲಿ ಸೌಕರ್ಯಗಳು:</u> ಸ್ಥಳೀಯ ಮಿನುಗಾರಿಕೆ ಸಮುದಾಯಗಳಿಗೆ ಬೇಕಾದ ಸೌಕರ್ಯಗಳಾದ ಮೀನು ಒಣಗಿಸುವ ಪ್ರಾಂಗಣ, ಹರಾಜು ಪ್ರಾಂಗಣ, ಬಲೆ ರಿಪೇರಿ ಪ್ರಾಂಗಣ, ಸಾಂಪ್ರದಾಯಿಕ ದೋಣಿಗಳ ನಿರ್ಮಾಣ ಪ್ರಾಂಗಣಗಳು, ಮಂಜುಗಡ್ಡೆ ಸ್ಥಾವರ, ಮಂಜುಗಡ್ಡೆ ಪುಡಿ ಮಾಡುವ ಘಟಕ, ಮೀನು ಸಂಸ್ಕರಣೆ ಸೌಲಭ್ಯ ಹಾಗು ಇತ್ಯಾದಿಗಳಿಗೆ 2011 ಅಧಿಸೂಚನೆಯ ಕರಾವಳಿ ನಿಯಂತ್ರಣ ವಲಯ III ರ ಅಭಿವೃದ್ಧಿ ನಿಷಿದ್ಧ ವಲಯದಲ್ಲಿ ಅನುಮತಿ ನೀಡಲಾಗಿದೆ. ***[ಪ್ಯಾರಾ 8, III (ಸಿಆರ್‌ಜೆಡ್ III), ಎ (iii) (I)].***

  ಸ್ಥಳೀಯ ನಿವಾಸಿಗಳಿಗೆ ಬೇಕಾದ ಔಷಧಾಲಯ, ಶಾಲೆಗಳು, ಸಾರ್ವಜನಿಕೆ ಮಳೆ ಆಶ್ರಯ, ಸಮುದಾಯ ಶೌಚಾಲಯಗಳು, ಸೇತುವೆಗಳು, ರಸ್ತೆಗಳು, ನೀರು ಸರಬರಾಜಿನ ಸೌಲಭ್ಯಗಳು, ಚರಂಡಿ ವ್ಯವಸ್ಥೆ, ತ್ಯಾಜ್ಯಾ ಚರಂಡಿ, ಶವ ದಹಣ ಕೇಂದ್ರ, ಸ್ಮಶಾನಗಳು ಮತ್ತು ವಿದ್ಯುತ್ ಉಪ ನಿಲ್ದಾನ ನಿರ್ಮಿಸಲು ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರವು ಪ್ರತಿ ಪ್ರಕರಣದ ಆಧಾರದ ಮೇಲೆ ಅನುಮತಿ ನೀಡಲಾಗುತ್ತದೆ ***[ಪ್ಯಾರಾ 8, III (CRZ III), ಎ (iii) (j)]***.

- <u>ಮುಂಬೈಯ ಕೋಲಿವಾಡಾಗಳಿಗೆ ವಿಶೇಷ ವ್ಯವಸ್ಥೆಗಳು:</u> ಬೃಹತ್ ಮುಂಬೈಗೆ ನೀಡಿರುವ ವಿಶೇಷ ನಿಯಮ ವಿಮುಕ್ತಿಯಡಿ ಕೋಲಿವಾಡಾಗಳನ್ನು (ಮೀನುಗಾರಿಕೆ ಸಮುದಾಯ ಹಳ್ಳಿಗಳನ್ನು) ನಕ್ಷೆಗೊಳಿಸಿ ಕರಾವಳಿ ನಿಯಂತ್ರಣ ವಲಯ III ಎಂದು ಘೋಷಿಸಲಾಗುವುದು ಎಂದು ನಿರ್ದಿಷ್ಠ ಪಡಿಸಲಾಗಿದೆ. ಮುಂದುವರೆದು, ಮೀನುಗಾರಿಕೆ ಸಮುದಾಯದ ವಾಸದ ಘಟಕಗಳನ್ನು ದುರಸ್ತಿ ಮತ್ತು ಪುನರ್ ನಿರ್ಮಿಸಲು ಅನುಮತಿಯನ್ನು ಆಧ್ಯತೆ ಮೇಲೆ ನೀಡಲಾಗುವುದು. ಈ ವ್ಯವಸ್ಥೆಗಳಿಂದ ಮುಂಬೈಯ ಮೀನುಗಾರಿಕೆ ಸಮುದಾಯಗಳು ತಮ್ಮ ಸಾಂಪ್ರದಾಯಿಕ ಭೂಮಿಯ

ಮೇಲಿನ ತಮ್ಮ ಹಕ್ಕುಗಳನ್ನು ಉಳಿಸಲು ಉಪಯೋಗವಾಗುತ್ತದೆ. ಕೇರಿ ಅಭಿವೃದ್ಧಿಗೆ ಸಂಬಂಧಿಸಿದ ನಿಬಂಧನೆಗಳಿಗೆ ಒಳಪಡೆದೆ ಕೋಲಿವಾಡಗಳು ತಮ್ಮ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು ಈ ವ್ಯವಸ್ಥೆಯನ್ನು ಮೀನುಗಾರಿಕೆ ಗ್ರಾಮಗಳ ಅಭಿವೃದ್ಧಿಗಾಗಿ ದೀರ್ಘಾವಧಿ ಯೋಜನೆಗಳನ್ನು ತಯಾರಿಸುವ ವ್ಯವಸ್ಥೆಯೊಂದಿಗೆ ಸೇರಿಸಿದಾಗ ಒಳ್ಳೆಯ ಅವಕಾಶ ನೀಡುತ್ತದೆ.

## ಮಾಹಿತಿಗಳ ಲಭ್ಯತೆ

- ಮಾಹಿತಿಗಳ ಲಭ್ಯತೆ: ಕರಾವಳಿ ವಲಯ ನಿರ್ವಹಣಾ ಯೋಜನೆಗಳಿಗೆ ಸಂಬಂಧಿಸಿದ ಎಲ್ಲಾ ಮಾಹಿತಿ, ತೀರುವಳಿ, ಅನುಪಾಲನಾ ವರದಿ, ಉಲ್ಲಂಘನೆ, ಉಲ್ಲಂಘನೆ ಮೇಲೆ ತೆಗೆದುಕೊಂಡ ಕ್ರಮ ಹಾಗೂ ಕರಾವಳಿ ನಿಯಂತ್ರಣ ವಲಯಕ್ಕೆ ಸಂಬಂಧೀಸಿದ ನ್ಯಾಯಲಯದ ಆದೇಶಗಳನ್ನು ಸಾರ್ವಜನಿಕರಿಗೆ ಲಭ್ಯಗೊಳಿಸಲು 2011 ಅಧಿಸೂಚನೆಯಲ್ಲಿ ಆದೇಶಿಸಲಾಗಿದೆ. ಕರಾವಳಿ ನಿಯಂತ್ರಣ ವಲಯಕ್ಕೆ ಸಂಬಂಧಿಸಿದ ಏನೇ ಮಾಹಿತಿಯನ್ನು ಸಂಬಂಧಪಟ್ಟ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಕ್ಕೆ ಬರೆದು ಪಡೆಯಬಹುಗಾಗಿದೆ. ಪ್ರತಿ ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರವು ಒಂದು ಸಮರ್ಪಿತ ವೆಬ್‌ಸೈಟನ್ನು ಸೃಜಿಸಿ ಮೇಲಿನ ಮಾಹಿತಿಯೊಂದಿಗೆ ಸಭೆಗಳ ವಿಷಯಸೂಚಿಗಳು, ತೆಗೆದುಕೊಂಡ ತೀರ್ಮಾನಗಳು, ನೀಡಲಾದ ತೀರುವಳಿಗಳನ್ನು ಲಭ್ಯಮಾಡುವುದು. ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳ ವೆಬ್‌ಸೈಟುಗಳನ್ನು ಪರಿಶೀಲಿಸುವುದು ಮತ್ತು ಮಾಹಿತಿಗಳನ್ನು ನೀಡಲಾಗುತ್ತಿದೆಯೇ ಎಂಬುದು ಖಚಿತಪಡಿಸಿಕೊಳ್ಳುವುದಲ್ಲದೆ ಈ ಮಾಹಿತಿಯನ್ನು ಉಪಯೋಗಿಸುವುದು ಬಹಳ ಮುಖ್ಯ ***[ಪ್ಯಾರಾ 4.2 (vi)].***

## ಕರಾವಳಿ ಜಲ ಮತ್ತು ಜೀವಾವರಣಗಳ ಮಾಲೀನ್ಯ ಮತ್ತ ಅಧಃಪತನ ನಿಯಂತ್ರಣ

- 12 ಮೈಲಿ ಪ್ರಾದೇಶಿಕ ಮಿತಿಯೊಳಗಿನ ಜಲ ಹಾಗೂ ಉಬ್ಬರವಿಳಿತದಿಂದ ಪ್ರಭಾವಿತ ಜಲನಿಕಾಯಗಳು ಕರಾವಳಿ ನಿಯಂತ್ರಣ ವಲಯ IV ರಲ್ಲಿ ಒಳಪಡುತ್ತದೆ. ಸದರಿ ಅಧಿಸೂಚನೆಯು ಈ ಪ್ರದೇಶಗಳ ಜೀವಾವರಣಕ್ಕೆ ಹಾನಿಕರವಾದ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ. ಉದಾಹರಣೆಗೆ ಜಲಕೃಷಿ ಕಾರ್ಯಾಚರಣೆ ಸೇರಿದಂತೆ ಎಲ್ಲಾ ಚಟುವಟಿಕೆಗಳಿಂದ ಉಂಟಾಗುವ ಸಂಸ್ಕರಿಸದ ಕೊಳೆನೀರು, ದ್ರವ ತ್ಯಾಜ್ಯಾಗಳು, ಬಲ್ಲಾಸ್ತ್ ನೀರು, ಹಡಗು ತೊಳೆದ ನೀರು, ಭೂದಿ ಅಥವಾ ಕಸಗಳ ವಿಲೇವಾರಿಯನ್ನು ನಿಷೇಧಿಸಲಾಗಿದೆ. ಕರಾವಳಿ ನಿಯಂತ್ರಣ ವಲಯ IV ರಲ್ಲಿ ತೈಲ ಮತ್ತು ಅನಿಲ ಅನ್ವೇಷಣೆ ಮತ್ತು ಡ್ರಿಲ್ಲಿಂಗ್, ಗಣಿಗಾರಿಕೆ, ಬೋಟ್ ಹೌಸ್ ಮತ್ತು ಹಡಗುಗಳಿಂದ ಉಂಟಾಗುವ ಮಾಲೀನ್ಯಗಳನ್ನು ನಿಯಂತ್ರಿಸಬೇಕಾಗಿದೆ. ***[ಪ್ಯಾರಾ 8, IV (a) ಮತ್ತು (b)].***

  ಸಂಸ್ಕರಿಸದ ಕೊಳೆನೀರು ಮತ್ತು ಕೈಗಾರಿಕೆಗಳಿ, ನಗರ, ಪಟ್ಟಣಗಳು ಮತ್ತು ಇತರೆ ಜನವಸತಿ ಪ್ರದೇಶಗಳಿಂದ ತಾಜ್ಯಾಗಳನ್ನು ವಿಲೇವಾರಿ ಮಾಡುವುದಕ್ಕೆ ಯಾವುದಾದರು ಪದ್ಧತಿ ರೀಢಿಯಲ್ಲಿದ್ದರೆ ಅದನ್ನು ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ (ಅಂದರೆ 6ನೇ ಜನವರಿ 2011) 2 ವರ್ಷಗಳಿಗೆ ಮೀರದ ಕಾಲಾವಧಿಯೊಳಗೆ ಹಂತ ಹಂತವಾಗಿ ಕೊನೆಗೊಳಿಸಲು ಎಲ್ಲಾ ಕರಾವಳಿ

ರಾಜ್ಯಗಳು ಕ್ರಮ ಕೈಗೊಳ್ಳುವುದು. ಮುಂದುವರೆದು, ಘನ ತ್ಯಾಜ್ಯ ಮತ್ತು ಭೂದಿಯನ್ನು ಬಿಡುವುದನ್ನು ಅಧಿಸೂವನೆಯ ಪ್ರಾರಂಭದ ಒಂದು ವರ್ಷದೊಳಗೆ ಕೊನೆಗಾಣಿಸುವುದು.

ಕರಾವಳಿ ನೀರು ಮತ್ತು ಜೀವಾವರಣ ಮಾಲೀನ್ಯ ಮತ್ತು ಅಧಃಪತನಗಳು ಮೀನುಗಾರಿಕೆ ಸಮುದಾಯಗಳಿಗೆ ಸಂಬಂಧಿಸಿದ ವಿಷಯವಾಗಿರುವುದುರಿಂದ ಈ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿದಲ್ಲಿ ಅವರಿಗೆ ಉಪಯೋಗವಾಗುತ್ತದೆ. ಮೀನುಗಾರಿಕೆ ಸಮುದಾಯಗಳು ಇಂತಹ ಮಾಲೀನ್ಯಗಳ ಮತ್ತು ವಿಲೇವಾರಿಯ ಮೇಲ್ವಿಚಾರಣೆ ಮಾಡಿ ಎಲ್ಲರ ಗಮನ ಸೆಳೆಯಲು ಬಹು ಮುಖ್ಯ ಪಾತ್ರ ವಹಿಸಬೇಕಾಗಿದೆ.

## 5. ಉಲ್ಲಂಘನೆಗಳನ್ನು ತಡೆಗಟ್ಟಲು ಮೀನುಗಾರಿಕೆ ಸಮುದಾಯಗಳು ಪಾತ್ರವೇನು?

ಮೀನುಗಾರರ ಸಮುದಾಯಗಳು ಭಾರತ ಇಡೀ ಕರಾವಳಿಯಲ್ಲಿ ಹರಡಿರುತ್ತದೆ. ಕರಾವಳಿಯ ತೀರದಲ್ಲಿ ಮತ್ತು ಕರಾವಳಿಯ ಸಮುದ್ರದಲ್ಲಿ ಉಂಟಾಗುತ್ತಿರುವ ಚಟುವಟಿಕೆಗಳನ್ನು ತಿಳಿದುಕೊಳ್ಳಲು ಅವರು ಒಳ್ಳೆಯ ಸ್ಥಾನದಲ್ಲಿರುತ್ತಾರೆ. ಕರಾವಳಿ ಜೀವಾವರಣ ಸಂರಕ್ಷಣೆಗಾಗಿ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011ನ್ನು ಸಮರ್ಪಕವಾಗಿ ಅನುಷಾನಗೊಳಿಸುವುದನ್ನು ಅವರಿಗೆ ಆಸಕ್ತಿಯುಳ್ಳ ವಿಷಯವಾಗಿರುತ್ತದೆ. 1991 ಅಧಿಸೂಚನೆಯ ಅನುಷ್ಠನದಲ್ಲಿ ಕೊರತೆಯಿದ್ದಕಾರಣ ಕರಾವಳಿಯಲ್ಲಿ ಪ್ರಬಲವಾಗಿ ವಿಧಿಬಾಹಿರ ಬೆಳವಣಿಗೆಗಳು ಉಂಟಾಗಿರುವುದ ಎಲ್ಲಿರಿಗೂ ತಿಳಿದಿರುವ ವಿಷಯವಾಗಿರುತ್ತದೆ. ಇದರಿಂದ ಮಿನುಗಾರರ ಸಮುದಾಯದ ಜೀವನ ಮತ್ತು ಜೀವನೋಪಾಯಕ್ಕೆ ಹಾನಿ ಉಂಟಾಗಿರುತ್ತದೆ. ಇನ್ನು ಮುಂದೆ ಇದು ನಡೆಯದಿರಲು ಸಮುದಾಯಗಳು ಎಲ್ಲಾ ಕಾಲದಲ್ಲಿಯೂ ಜಾಗರೂಕರಾಗಿರಬೇಕು.

ಕರಾವಳಿ ನಿಯಂತ್ರಣ ವಲಯ 2011 ಅಧಿಸೂಚನೆಯ ಮುಖ್ಯ ವ್ಯವಸ್ಥೆಗಳ ಬಗ್ಗೆ ಸಮುದಾಯಗಳು ಪರಿಚಿತರಾಗುವುದು ಬಹಳ ಮುಖ್ಯವಾಗಿರುತ್ತದೆ. ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದಿಂದ ಕರಾವಳಿ ವಲಯ ನಿರ್ವಹಣಾ ಯೋಜನೆಗಳನ್ನು ಲಭ್ಯಗೊಳಿಸಲು ಕೋರಬೇಕು. 2011 ಅಧಿಸೂಚನೆಯ ಪ್ರಕಾರ ಹೊಸ ಕರಾವಳಿ ವಲಯ ನಿರ್ವಹಣಾ ಯೋಜನೆಗಳು ಅನುಮೋದನೆಯಾಗುವವರೆಗೆ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 1991 ರಡಿ ತಯಾರಿಸಿದ ಕರಾವಳಿ ವಲಯ ನಿರ್ವಹಣಾ ಯೋಜನೆಗಳನ್ನೆ ಪಾಲಿಸಲಾಗುವುದು ಎಂಬುದು ಈ ಸಂಧರ್ಬದಲ್ಲಿ ಗಮನಿಸಬೇಕಾಗಿದೆ.

## ಕರಾವಳಿ ನಿಯಂತ್ರಣ ವಲಯ I, II ಮತ್ತು III ಒಳಗಿನ ಉಲ್ಲಂಘನೆಗಳು (ಕರಾವಳಿ ಭೂಮಿ)

ಕರಾವಳಿ ನಿಯಂತ್ರನ ವಲಯದಲ್ಲಿ ಬೃಹತ್ ಯೋಜನೆಗಳು ಅಥವಾ ಕಟ್ಟಡ ಚಟುವಟಿಕೆಗಳ ಬಗ್ಗೆ ಸಮುದಾಯಗಳು ಜಾಗರೂಕರಾಗಿರಬೇಕು (ವಲಯವು ಸಿಆರ್ ಜೆಡ್ 1, 2 ಅಥವಾ 3 ಎಂಬುದು ಗಮನದಲ್ಲಿರಿಸುವುದು). ಯಾವುದೇ ಚಟುವಟಿಕೆಯು ಕರಾವಳಿ ನಿಯಂತ್ರಣ ವಲಯ

ಅಧಿಸೂಚನೆ 2011 ಉಲ್ಲಂಘಿಸಿಲಾಗಿದೆ ಎಂದು ಸಂಶಯವಿದ್ದಲ್ಲಿ ಕೆಳಗಿನ ಕ್ರಮಗಳು ಒಳಗೊಂಡ ಹಲವಾರು ಕ್ರಮಗಳನ್ನು ಕೈಗೊಳ್ಳಬಹುದಾಗಿದೆ.

- ಯೋಜನೆಯ ಬಗ್ಗೆ ಸಾಕಷ್ಟು ಮಾಹಿತಿಯನ್ನು ಸಂಗ್ರಹಿಸುವುದು – ಕಂಪನಿಯ ಹೆಸರು, ಸಕಾರಿ ಇಲಾಖೆ/ ಸಂಸ್ಥೆ, ಯೋಜನೆಯನ್ನು ಕೈಗೊಳ್ಳುತ್ತಿರುವ ವ್ಯಕ್ತಿಯ ವಿವರಗಳನ್ನು ಹಾಗೂ ಖಚಿತವಾದ ಸ್ಥಳ (ಸರ್ವೆ ಸಂಖ್ಯೆ) ಒಳಗೊಂಡಿರತಕ್ಕದ್ದು.
- ಸದರಿ ಯೋಜನೆಗೆ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದ ಅನುಮತಿ ಇದಯೆ ಎಂಬುದನ್ನು ಪರಿಶೀಲಿಸುವುದು. 2011 ಅಧಿಸೂವನೆಯ ಪ್ರಕಾರ ಎಲ್ಲಾ ಯೋಜನೆಗಳ ತೀರುವಳಿ ಎಲ್ಲಾ ರಾಜ್ಯ / ಕೇಂದ್ರಾಡಳಿತ ಪ್ರದೇಶಗಳ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಬೇಕಾಗಿದೆ. ಅನುಮತಿ ನೀಡಿದ ಬಗ್ಗೆ ವಿವರಗಳನ್ನು ಪ್ರಕಟಿಸದಿದಲ್ಲಿ ತಕ್ಷಣವೇ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದ ಪ್ರತಿನಿಧಿಯನ್ನು ಸಂಪರ್ಕಿಸಿ ಸ್ಪಷ್ಟೀಕರಣ ಪಡೆಯಹುದಾಗಿದೆ. ಹಾಗೂ ಮಾಹಿತಿಯನ್ನು ಆನ್ ಲೀನ್ ಪ್ರಕಟಿಸಲು ಕೋರಬಹುದಾಗಿದೆ.
- ಯೋಜನೆಗೆ ಅನುಮತಿ ನೀಡದಿದಲ್ಲಿ ಅಂದರೆ ವಿಧಿಬಾಹಿರವಿದ್ದಲ್ಲಿ ದೂರಗಳನ್ನು ತಕ್ಷಣದಲ್ಲಿ ರಾಜ್ಯ / ಕೇಂದ್ರಾಡಳಿತ ಪ್ರದೇಶಗಳ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಕ್ಕೆ ಹಾಗೂ ಪರಿಸರ ಮತ್ತು ಅರಣ್ಯ ಮಂತ್ರಾಲಯಕ್ಕೆ ಕಳುಹಿ ಪ್ರತಿಗಳನ್ನು ರಾಷ್ಟ್ರೀಯ ಮೀನುಕಾರ್ಮಿಕರ ಫೋರಮ್, ಜನರಲ್ ಕಾರ್ಯದರ್ಶಿಯವರಿಗೆ ಕಳುಹಿಸುವುದು..
- ತೀರುವಳಿ ಪಡೆದ ಯೋಜನೆಯು ಕೆಲವೊಮ್ಮೆ ಅದರಲ್ಲಿ ಸೂಚಿಸಿದ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸುವ ಸಾಧ್ಯತೆಯು ಸಹ ಇರುತ್ತದೆ. ಆದುದರಿಂದ ತೀರುವಳಿಯ ಪ್ರತಿಯನ್ನು ಪಡೆದು ಇದನ್ನು ಗಮನಿಸುವುದು ಮುಖ್ಯ.
- ಕರಾವಳಿ ನಿಯಂತ್ರಣ ವಲಯ ಅಧಿಸೂಚನೆಯ (ಕರಾವಳಿ ವಲಯ ನಿರ್ವಹಣಾ ಯೋಜನೆಯನ್ನು ನೋಡುವುದು) ವ್ಯವಸ್ಥೆಗಳನ್ನು ಉಲ್ಲಂಘಿಸಿದರು ಅವರಿಗೆ ಅನುಮತಿ ನಿಡಲಾಗಿದೆ ಎಂದ ಸಂಶಯವಿದ್ದಲ್ಲಿ ಹಾಗೂ ಸದರಿ ಯೋಜನೆಯಿಂದ ಕರಾವಳಿ ಜೀವಾವರಣದಲ್ಲಿ ನಿರ್ದಿಷ್ಟವಾದ ಜೀವ ಪರಿಸರದ ಪರಿಣಾಮವಿದ್ದಲ್ಲಿ, ನಿಮ್ಮ ಪ್ರಕರಣಕ್ಕೆ ಬೆಂಬಲವಾಗುವಂತೆ ಸಾಕಷ್ಟು ಮಾಹಿತಿಗಳನ್ನು ಕ್ರೋಢೀಕರಿಸುವುದು. ಉಲ್ಲಂಘನೆಯ ರೀತಿಯನ್ನು ಪ್ರಾತ್ಯಕ್ಷತೆಗೊಳಿಸಲು ಚಟುವಟಿಕೆಯ ರೀತಿ, ಯೋಜನೆಯ ಹಾಲಿ/ ಪರಿಣಾಮ ಸಾಧಯತೆಗಳು, ಉಲ್ಲಂಘನೆಗಳ ಛಾಯಾಚಿತ್ರ, ಗೂಗಲ್ ಎರ್ತ್ ಮೂಲಕ ಸ್ಥಳದ ನಕಾಶೆ ಇತ್ಯಾದಿಗಳನ್ನು ಸಂಗ್ರಹಿಸತಕ್ಕದ್ದು.
- ಎಲ್ಲಾ ದೂರುಗಳನ್ನು ರಾಜ್ಯ / ಕೇಂದ್ರಾಡಳಿತ ಪ್ರದೇಶಗಳ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಕ್ಕೆ ಹಾಗೂ ಪರಿಸರ ಮತ್ತು ಅರಣ್ಯ ಮಂತ್ರಾಲಯಕ್ಕೆ ಕಳುಹಿಸಬೇಕಾಗಿದೆ. ಅದರ ಪ್ರತಿಗಳನ್ನು ರಾಷ್ಟ್ರೀಯ ಮೀನುಕಾರ್ಮಿಕರ ಫೋರಮ್, ಜನರಲ್ ಕಾರ್ಯದರ್ಶಿಯವರಿಗೆ ಕಳುಹಿಸುವುದು. ಸಂಬಂಧಪಟ್ಟ ವಿಳಾಸಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
- ಕಷ್ಟಕರವಾಗಿರುವ ಏನೇ ಮಾಹಿತಿಯನ್ನು ಮಾಹಿತಿ ಹಕ್ಕು ಅಧಿನಿಯಮವನ್ನು ಉಪಯೋಗಿಸಿ ಸಂಬಂಧಪಟ್ಟ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದಿಂದ, ಗ್ರಾಮ ಪಂಚಾಯ್ತಿ

ಅಥವಾ ಪುರಸಭೆಗಳು, ಹಾಗೂ ಪರಿಸರ ಮತ್ತು ಅರಣ್ಯ ಮಂತ್ರಾಲಯದಿಂದ ಪಡೆಯಬಹುದಾಗಿದೆ.

## ಕರಾವಳಿ ನಿಯಂತ್ರಣ ವಲಯ – IV ರೊಳಗಿನ ಉಲ್ಲಂಘನೆಗಳು (ಪ್ರಾದೇಶಿಕ ಜಲ ಮತ್ತು ಉಬ್ಬರವಿಳಿತದಿಂದ ಪ್ರಭಾವಿತವಾದ ಜಲನಿಕಾಯಗಳು)

ಸಮುದಾಯಗಳು ಕರಾವಳಿ ನೀರಿನಲ್ಲಿ ರಾಶಿಹಾಕುವುದನ್ನು ಮತ್ತು ಮಾಲೀನ್ಯಗೊಳಿಸುವುದರ ಬಗ್ಗೆ ಜಾಗರೂಕರಾಗಿರಬೇಕು. ಇಂತಹ ಎಲ್ಲಾ ಪ್ರಕರಣಗಳನ್ನು (ಛಾಯಾಚಿತ್ರಗಳು, ವಾಹನದ ಸಂಖ್ಯೆ, ಹಡಗುಗಳ/ದೋಣಿಗಳ ಹೆಸರು, ಖಚಿತವಾದ ಸ್ಥಳ, ಇತ್ಯಾದಿ ಒಳಗೊಂಡ ಸಾಕಷ್ಟು ವಿವರಗಳು) ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಕ್ಕೆ ಹಾಗೂ ಸೂಕ್ತ ಕ್ರಮ ತೆಗೆದುಕೊಳ್ಳಲು ಪರಿಸರ ಮತ್ತು ಅರಣ್ಯ ಮಂತ್ರಾಲಯದ ಗಮನಕ್ಕೆ ತರತಕ್ಕದ್ದು.

**1991 ಕರಾವಳಿ ನಿಯಂತ್ರಣ ವಲಯ ಅಧಿಸೂಚನೆಗೆ ಉಲ್ಲಂಘನೆಗಳು**

**ದಿನಾಂಕ 25 ಜನವರಿ 2011 ರಂದು ಪರಿಸರ ಮತ್ತು ಅರಣ್ಯ ಮಂತ್ರಾಲಯದಿಂದ ಪರಿಸರ (ಸಂರಕ್ಷಣೆ) ಅಧಿನಿಯಮ 1986 ರ ಸೆಕ್ಷನ್ 5 (ಮೆಮೋ no.11-83/2005-IA-III dt.25.1.2001) ರ ಪ್ರಕಾರ ಕರಾವಳಿ ರಾಜ್ಯಗಳ/ ಕೇಂದ್ರಾಡಳಿತ ಪ್ರದೇಶಗಳ ಎಲ್ಲಾ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಕ್ಕೆ ಈ ಕೆಳಗಿನ ನಿರ್ದೇಶನಗಳನ್ನು ಹೊರಡಿಸಲಾಯಿತು:**

**ಅ) ಸದರಿ ನಿರ್ದೇಶನ ಸ್ವೀಕರಿಸಿದ ನಾಲ್ಕು ತಿಂಗಳ ಅವಧಿಯಲ್ಲಿ ಅವರ ವ್ಯಾಪ್ತಿಯೊಳಗಿನ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 1991 ರ ಉಲ್ಲಂಘನೆಗಳನ್ನು ಮತ್ತು ಅನುಮೋದಿತ ಕರಾವಳಿ ವಲಯ ನಿರ್ವಹಣೆ ಯೋಜನೆಗಳನ್ನು ಗುರುತಿಸುವುದು.**

**ಆ) ತದನಂತರ ನಾಲ್ಕು ತಿಂಗಳೊಳಗೆ ಗುರುತಿಸಲಾದ ಉಲ್ಲಂಘನೆಗಳ ಮೇಲೆ ಪರಿಸರ (ಸಂರಕ್ಷಣೆ) ಅಧಿನಿಯಮ 1986 ರಡಿ ಕ್ರಮ ಪ್ರಾರಂಭಿಸುವುದು;**

**ಇ) ಪ್ಯಾರಾ (ಅ) ಮತ್ತು (ಬ) ರ ಪ್ರಕಾರ ಗುರುತಿಸಲಾದ ಉಲ್ಲಂಘನೆಗಳು ಹಾಗೂ ಈ ಉಲ್ಲಂಘನೆಗಳ ಮೇಲೆ ತೆಗೆದಿಕೊಂಡ ಕ್ರಮಗಳು ಸೇರಿದಂತೆ ಅಗತ್ಯ ವಿವರಗಳನ್ನು ಅವರ ವೆಬ್‌ಸೈಟಿನಲ್ಲಿ ಪ್ರತಿ ಪಾಕ್ಷಿಕ ಅಪ್‌ಲೋಡ್ ಮಾಡುವುದು.**

**ಕಳೆದ ಎರಡು ದಶಕಗಳಲ್ಲಿ ಉಂಟಾದ ಉಲ್ಲಂಘನೆಗಳನ್ನು ಹೊರತರಲು ಹಾಗೂ ರಾಜ್ಯ/ ಕೇಂದ್ರಾಡಳಿತ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಗಳು ಹಾಗೂ ಪರಿಸರ ಮತ್ತು ಅರಣ್ಯ ಮಂತ್ರಾಲಯದಿಂದ ಹೊಣೆಗಾರಿಕೆಯನ್ನು ಅಪೇಕ್ಷಿಸಲು ಇದು ಒಂದು ಅವಸರವಾಗಿರುತ್ತದೆ.**

**ಹಾಲಿ ಇರುವ ಉಲ್ಲಂಘನೆಗಳ ಬಗ್ಗೆ ಸಾಕಷ್ಟು ಮಾಹಿತಿಯನ್ನು ಪಡೆದು (ಈ ಮೊದಲು ಚರ್ಚಿಸಿದಂತೆ) ದೂರನ್ನು ತಕ್ಷಣವೆ ರಾಜ್ಯ / ಕೇಂದ್ರಾಡಳಿತ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಕ್ಕೆ ಹಾಗೂ ಪರಿಸರ ಮತ್ತು ಅರಣ್ಯ ಮಂತ್ರಾಲಯಗಳಿಗೆ ಕಳುಹಿಸಿ ಪ್ರತಿಯನ್ನು ರಾಷ್ಟ್ರೀಯ ಮೀನುಕಾರ್ಮಿಕರ ಫೋರಮ್,   ಜನರೆಲ್ ಕಾರ್ಯದಶಿಯವರಿಗೆ ಕಳುಹಿಸುವುದು.**

*ಅನುಬಂಧ*

**ಮುಖ್ಯವಾದ ವೆಬ್ ಸೈಟುಗಳು ಮತ್ತು ವಿಳಾಸಗಳು**

**ವೆಬ್ ಸೈಟುಗಳು**

**ಸರ್ಕಾರದ ಸಂಸ್ಥೆಗಳು**

**ರಾಷ್ಟ್ರಮಟ್ಟದ: ಪರಿಸರ ಮತ್ತು ಅರಣ್ಯ ಮಂತ್ರಾಲಯ**

**www.moef.nic.in**

**http://envfor.nic.in/legis/crz.htm**

**http://moef.nic.in/modules/others/?f=press-releases**

**http://moef.nic.in/modules/public-information/orders-guidelines/**

**ರಾಜ್ಯ ಮಟ್ಟದ:**

**ಗುಜರಾತ್:** **http://gujenvfor.gswan.gov.in/e-citizen/e-citizen-clearances.htm**

**ದಾಮನ್ ದಿಯು:** **www.daman.nic.in**

**ಮಹಾರಾಷ್ಟ್ರ :** **http://mczma.maharashtra.gov.in/**

**http://envis.maharashtra.gov.in/**

**http://envis.maharashtra.gov.in/envis_data/?q=mczma_s**

**ಕಾರ್ನಟಕ:** **http://parisara.kar.nic.in/**

**ಕೇರಳ:** **http://www.kerenvis.nic.in/kczma/**

**ತಮಿಳು ನಾಡು:** **http://www.tnenvis.nic.in/crz_noti_coastal.htm**

**ಪಾಂಡಿಚೇರಿ:** **http://dste.puducherry.gov.in/PCZMAHOME.htm**

**ಪಶ್ಚಿಮ ಬಂಗಾಲ:** **http://wbsczma.gov.in/**

**http://enviswb.gov.in/**

ವಿಳಾಸಗಳು

| | |
|---|---|
| ಪರಿಸರ ಮತ್ತು ಅರಣ್ಯ ಮಂತ್ರಾಲಯ ಮುಖ್ಯ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳು | ದಕ್ಷಿಣ ವಲಯ, ಬೆಂಗಳೂರು<br>ಶ್ರೀ ಕೆ.ಎಸ್.ರೆಡ್ಡಿ,<br>ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಕೇಂದ್ರೀಯ),<br>ಕೇಂದ್ರೀಯ ಸದನ, 4ನೇ ಮಹಡಿ,<br>ಪರಿಸರ ಮತ್ತು ಅರಣ್ಯ ವಿಭಾಗ, 2ನೇ ಬ್ಲಾಕ್,<br>ಕೋರಮಂಗಲ, ಬೆಂಗಳೂರು–560 034<br>ದೂರವಾಣಿ ಸಂ.080–25537184<br>ಫ್ಯಾಕ್ಸ್ ಸಂ.080–25537184<br><br>ಪೂರ್ವ ವಲಯ, ಭುವನೇಶ್ವರ<br>ಶ್ರೀ ಜೆ.ಕೆ.ತಿವಾರಿ,<br>ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಕೇಂದ್ರೀಯ),<br>ಎ/3, ಚಂದ್ರಶೇಖರಪುರ, ಭುವನೇಶ್ವರ–751023.<br>ದೂರವಾಣಿ ಸಂ.0674–2301213<br>ಫ್ಯಾಕ್ಸ್ – 0674–2302432<br><br>ಪಶ್ಚಿಮ ವಲಯ, ಭೋಪಾಲ್<br>ಶ್ರೀ.ಎ.ಕೆ. ರಾನಾ<br>ಮುಖ್ಯ ಅರಣ್ಯ ಸಂರಕ್ಷನಾಧಿಕಾರಿ (ಕೇಂದ್ರೀಯ)<br>ಕೇಂದ್ರೀಯ ಪರ್ಯಾವರಣ ಭವನ, ಲಿಂಕ್ ರೋಡ್,<br>ನಂ.3, ಭೋಪಾಲ್–462 016<br>ದೂರವಾಣಿ – 0755 – 2465494 |
| ರಾಷ್ಟ್ರೀಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ | ಅಧ್ಯಕ್ಷಕರು,<br>ರಾಷ್ಟ್ರೀಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ, ಪರಿಸರ ಮತ್ತು ಅರಣ್ಯ ಮಂತ್ರಾಲಯ, ಭಾರತ ಸರ್ಕಾರ, ಪರ್ಯಾವರಣ ಭವನ, ಸಿಜಿಓ ಕಾಂಪ್ಲೆಕ್, ಲೋಧಿ ರೋಡ್, ನವದೆಹಲಿ–110 003. |
| ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ | |
| ಗುಜರಾತ್ | ಅಧ್ಯಕ್ಷಕರು,<br>ಗುಜರಾತ್ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ ಹಾಗೂ ಪ್ರಧಾನ ಕಾರ್ಯದರ್ಶಿಗಳು, ಪರಿಸರ ಮತ್ತು ಅರಣ್ಯ ಇಲಾಖೆ, ಬ್ಲಾಕ್ ಸಂ.14, 8ನೇ ಮಹಡಿ, ಸಚಿವಾಲಯ,<br>ಗಾಂಧಿನಗರ–382 010, ಗುಜರಾತ್.<br><br>ಸದಸ್ಯ ಕಾರ್ಯದರ್ಶಿ,<br>ಗುಜರಾತ್ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ ಮತ್ತು |

| | |
|---|---|
| | ನಿರ್ದೇಶಕರು, ಪರಿಸರ ಮತ್ತು ಅರಣ್ಯ ಇಲಾಖೆ, ಬ್ಲಾಕ್ ಸಂ.14, 8ನೇ ಮಹಡಿ, ಸಚಿವಾಲಯ, ಗಾಂಧಿನಗರ–382 010. |
| ದಾಮನ್ ಮತ್ತು ದಿಯು | ಅಧ್ಯಕ್ಷರು,<br>ದಮನ್ ಮತ್ತು ದಿಯು ಕರಾವಳಿ ವಲಲಯ ನಿರ್ವಹಣಾ ಪ್ರಾಧಿಕಾರ ಮತ್ತು ಆಡಳಿತಾಧಿಕಾರಿ, ದಾಮನ್ ಮತ್ತು ದಿಯು, ದಮನ್–396 210<br><br>ಉಪ ಅರಣ್ಯ ಸಂರಕ್ಷಣಾಧಿಕಾರಿ,<br>ಉಪ ಅರಣ್ಯ ಸಂರಕ್ಷಣಾಧಿಕಾರಿ ಯವರ ಕಛೇರಿ, ದಾಮನ್ ಮತ್ತು ದಿಯು ಆಡಳಿತ, ದಮನ್–396 210 |
| ಮಹಾರಾಷ್ಟ್ರ | ಅಧ್ಯಕ್ಷರು,<br>ಮಹಾರಾಷ್ಟ್ರ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ<br>ಪರಿಸರ ಇಲಾಖೆ, 15ನೇ ಮಹಡಿ, ಹೊಸ ಆಡಳಿತ ಕಟ್ಟಡ,<br>ಮಂತ್ರಾಲಯ ಎದುರು, ಮಾಡಮ್ ಕಾಮ ರೋಡ್,<br>ಮುಂಬಯಿ–400 020<br><br>ಸದಸ್ಯ ಕಾರ್ಯದರ್ಶಿ<br>ಮಹಾರಾಷ್ಟ್ರ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ<br>ಪರಿಸರ ಇಲಾಖೆ, ಉಪಕಾರ್ಯದರ್ಶಿ,<br>15ನೇ ಮಹಡಿ, ಹೊಸ ಆಡಳಿತ ಕಟ್ಟಡ,<br>ಮಂತ್ರಾಲಯದ ಎದುರು,<br>ಮಾಡಮ್ ಕಾಮ ರಸ್ತೆ, ಮುಂಬಯಿ–400 020. |
| ಗೋವಾ | ಅಧ್ಯಕ್ಷಕರು,<br>ಗೋವಾ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ ಮತ್ತು ಮುಖ್ಯ ಕಾರ್ಯದರ್ಶಿ,<br>ಪಣಜಿಂ, ಗೋವಾ<br><br>ಸದಸ್ಯ ಕಾರ್ಯದರ್ಶಿ,<br>ಗೋವಾ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ<br>ಗೋವಾ ಸರ್ಕಾರ, ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ ಇಲಾಖೆ,<br>ಸಾಲಿಗಾವೋ ಸೆಮಿನರಿ ಎದುರು, ಸಾಲಿಗಾವೊ,<br>ಗೋವಾ–403 511. |
| ಕರ್ನಾಟಕ | ಅಧ್ಯಕ್ಷಕರು,<br>ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ ಮತ್ತು ಪ್ರಧಾನ ಕಾರ್ಯದರ್ಶಿ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಡಾ॥ ಅಂಬೇಡ್ಕರ್ ವೀಧಿ,<br>ಬೆಂಗಳೂರು–560 001. |

| | |
|---|---|
| | ಸದಸ್ಯ ಕಾರ್ಯದರ್ಶಿ,<br>ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ ಮತ್ತು ನಿರ್ದೇಶಕರು, ಪರಿಸರ, ತಾಂತ್ರಿಕ ಶಾಖೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು–560 001. |
| ಕೇರಳ | ಅಧ್ಯಕ್ಷಕರು,<br>ಕೇರಳ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ,<br>ಶಾಸ್ತ್ರ ಭವನ, ಪಟ್ಟಂ, ತಿರುವನಂತಪುರಂ –4<br><br>ಸದಸ್ಯ ಕಾರ್ಯದರ್ಶಿ,<br>ಕೇರಳ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ ಮತ್ತು ನಿರ್ದೇಶಕರು, ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ ಪರಿಷತ್ತು, ಶಾಸ್ತ ಭವನ, ಪಟ್ಟಂ, ತಿರುವನಂತಪುರಂ–4. |
| ತಮಿಳುನಾಡು | ಅಧ್ಯಕ್ಷಕರು,<br>ತಮಿಳುನಾಡು ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ ಮತ್ತು ಮುಖ್ಯ ಕಾರ್ಯದರ್ಶಿ, ಪರಿಸರ ಮತ್ತು ಅರಣ್ಯ ಇಲಾಖೆ,<br>1ನ ಮಹಡಿ, ಪನಗಲ್ ಕಟ್ಟಡ, ಸಾಯಿದಾ ಪೇಟೆ, ಚೆನ್ನೈ–600015 ತಮಿಳುನಾಡು.<br><br>ಸದಸ್ಯ ಕಾರ್ಯದರ್ಶಿ,<br>ತಮಿಳುನಾಡು ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ ಮತ್ತು ನಿರ್ದೇಶಕರು,, ಪರಿಸರ ಇಲಾಖೆ, ತಮಿಳುನಾಡು ಸರ್ಕಾರ,<br>ನೆಲಮಹಡಿ, ಪನಗಲ್ ಕಟ್ಟಡ, ಸಾಯಿದಾ ಪೇಟೆ, ಚೆನ್ನೈ–600015 ತಮಿಳುನಾಡು. |
| ಪುದುಚರಿ | ಅಧ್ಯಕ್ಷಕರು,<br>ಪಾಂಡಿಚೇರಿ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ ಮತ್ತು ಪ್ರಧಾನ ಕಾರ್ಯದರ್ಶಿ, ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ ಮತ್ತು ಗೃಹ ಮಂಡಳಿ, ಪಾಂಡಿಚೇರಿ–605 001.<br><br>ಸದಸ್ಯ ಕಾರ್ಯದರ್ಶಿ,<br>ಪಾಂಡಿಚೇರಿ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ ಮತ್ತು ನಿರ್ದೇಶಕರು, ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ ಮತ್ತು ಗೃಹ ಮಂಡಳಿ, ಪಾಂಡಿಚೇರಿ–605 001. |
| ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು | ಅಧ್ಯಕ್ಷಕರು,<br>ಅಂಡಮಾನ್ ಮತ್ತು ನಿಕೋಬಾರ್ ರಾಜ್ಯ ಕರಾವಳಿ ವಲಯ |

| | |
|---|---|
| | ನಿರ್ವಹಣಾ ಪ್ರಾಧಿಕಾರ, ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ,<br>ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಆಡಳಿತ,<br>ಚತಂ, ಪೋರ್ಟ್‌ಬ್ಲೇರ್–744 102<br><br>ಸದಸ್ಯ ಕಾರ್ಯದರ್ಶಿ,<br>ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿ,<br>ಅಂಡಮಾನ್ ಮತ್ತು ನಿಕೋಬಾರ್ ರಾಜ್ಯ ಕರಾವಳಿ ವಲಯ<br>ನಿರ್ವಹಣಾ ಪ್ರಾಧಿಕಾರ, ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ,<br>ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಆಡಳಿತ,<br>ಚತಂ, ಪೋರ್ಟ್‌ಬ್ಲೇರ್–744 102 |
| ಆಂಧ್ರ ಪ್ರದೇಶ | ಅಧ್ಯಕ್ಷಕರು,<br>ಆಂಧ್ರ ಪ್ರದೇಶ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ ಮತ್ತು<br>ಅಪರ ಮುಖ್ಯ ಕಾರ್ಯದರ್ಶಿ,<br>ಆಂಧ್ರಪ್ರದೇಶ ಸರ್ಕಾರ, ಪರಿಸರ, ಅರಣ್ಯ, ವಿಜ್ಞಾನ ಮತ್ತು ತಂತ್ರಜ್ಞಾನ<br>ಇಲಾಖೆ, ಸಚಿವಾಲಯ, ಹೈದರಾಬಾದ್–500 022.<br><br>ಸದಸ್ಯ ಕಾರ್ಯದರ್ಶಿ,<br>ಆಂಧ್ರ ಪ್ರದೇಶ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ,<br>ಆಂಧ್ರಪ್ರದೇಶ ಸರ್ಕಾರ, ಪರಿಸರ, ಅರಣ್ಯ, ವಿಜ್ಞಾನ ಮತ್ತು ತಂತ್ರಜ್ಞಾನ<br>ಇಲಾಖೆ, ಸಚಿವಾಲಯ, ಹೈದರಾಬಾದ್–500 022. |
| ಒಡಿಸ್ಸಾ | ಅಧ್ಯಕ್ಷರು,<br>ಒಡಿಸ್ಸಾ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ<br>ಮತ್ತು ಮುಖ್ಯ ಕಾರ್ಯದರ್ಶಿ,<br>ವಿಜ್ಞಾನ, ತಂತ್ರಜ್ಞಾನ, ಪರಿಸರ ಮತ್ತು ಅರಣ್ಯ ವಿಭಾಗ<br>ಒಡಿಸ್ಸಾ ಸಚಿವಾಲಯ, ಭುಬನೇಶ್ವರ–751 001.<br><br>ಸದಸ್ಯ ಕಾರ್ಯದರ್ಶಿ,<br>ಒಡಿಸ್ಸಾ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ<br>ಮತ್ತು ನಿರ್ದೇಶಕರು,<br>ವಿಜ್ಞಾನ, ತಂತ್ರಜ್ಞಾನ, ಪರಿಸರ ಮತ್ತು ಅರಣ್ಯ ವಿಭಾಗ<br>ಒಡಿಸ್ಸಾ ಸಚಿವಾಲಯ, ಭುಬನೇಶ್ವರ–751 001. |
| ಪಶ್ಚಿಮ ಬಂಗಾಳ | ಅಧ್ಯಕ್ಷರು,<br>ಕಾರ್ಯದಶಿ, ಪರಿಸರ ಇಲಾಖೆ, ಪಶ್ಚಿಮ ಬಂಗಾಳ ಸರ್ಕಾರ<br>ಲೇಖಕರ ಕಟ್ಟಡ, ಜಿ–ಬ್ಲಾಕ್, 2ನೇ ಮಹಡಿ,<br>ಕೋಲ್ಕತ್ತ–700 001. |

| | |
|---|---|
| | **ಸದಸ್ಯ ಕಾರ್ಯದರ್ಶಿ,<br>ಪಶ್ಚಿಮ ಬಂಗಾಳ ಮಾಲಿನ್ಯ ನಿಯಂತ್ರಣಾ ಮಂಡಳಿ ಮತ್ತು ಸದಸ್ಯ ಕಾರ್ಯದರ್ಶಿ, ಪಶ್ಚಿಮ ಬಂಗಾಳ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ, ಪಶ್ಚಿಮ ಬಂಗಾಳ ಮಾಲಿನ್ಯ ನಿಯಂತ್ರಣಾ ಮಂಡಳಿ, ಪರಿಬೇಶ್ ಭವನ, 10–ಎ, ಬ್ಲಾಕ್–ಎಲ್.ಎ., ಸೆಕ್ಟರ್–111, ಸಾಲ್ಟ್ ಲೇಕ್ ಸಿಟಿ, ಕೊಲ್ಕತ್ತಾ–700 098** |

**ರಾಷ್ಟ್ರೀಯ ಮೀನುಕಾರ್ಮಿಕರ ಫೋರಮ್ (ಎನ್.ಎಫ್.ಎಫ್) ನೆ ಸಂಪರ್ಕ ಅಧಿಕಾರಿಯ ವಿಳಾಸ:**

**ಶ್ರೀ. ಪ್ರದೀಪ್ ಚಾಟರ್ಜೀ,**
**20/4 ಸಿಲ್ ಲೇನ್,**
**ಕೋಲ್ಕತ್ತ, ಪಶ್ಚಿಮ ಬಂಗಾಲ,**
**ಭಾರತ**

**ಇ–ಮೇಲ್: pradipdisha@gmail.com**

**www.coastalcampaign.page.tl**


KARNATAKA
Bidar
Gulbarga
Bijapur
Raichur
Bagalkot
Belgaum
Koppal
Dharwad
Gadag
Bellary
Uttara Kannada
Haveri
T - Tumkur
Davanagere
T
Shimoga
Chitradurga
Kolar
Udupi
Chikmagalur
Tumkur
Bangalore
Hassan
Dakshina Kannada
Mandya
Bangalore Rural
Kodagu
Mysore
Chamarajanagar